ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಸೆಪ್ಟಂಬರ್-೨೦೦೭ ಸಂಚಿಕೆ-೨



ಭಗತ್ ಸಿಂಗ್



ಗಾಂಧೀ

ಹಿಂಸೆ ಅಹಿಂಸೆ
ವಿಚಾರಗಳ ವೇದಿಕೆ
ಸೆಪ್ಟಂಬರ್

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಸೆಪ್ಟಂಬರ್-೨೦೦೭
ಸಂಪುಟ-೮
ಸಂಚಿಕೆ-೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

೦೮೨೩೬ ೨೯೮೭೫೪
e-mail - janapada@yahoo.com

ಇದು ನಿನ್ನದೇ ರಾಜ್ಯ

ಇಲ್ಲಿ ಹುಲಿಯೊಂದನ್ನು ಸೃಷ್ಟಿಸಿದೆ
ಅಲ್ಲಿ ಹುಲ್ಲೆಯೊಂದನ್ನು ಸೃಷ್ಟಿಸಿದೆ
ಇದು ಬೇಕಿತ್ತೆ ಅನ್ನುವಂತಿಲ್ಲ
ಎಷ್ಟೆಂದರೂ ಇದು ನಿನ್ನ ರಾಜ್ಯ.

ಅಪಾರಕೌಶಲವನ್ನಿತ್ತು
ಗೂಡಿನೊಳಗೆ ಭರವಸೆಯ ಮೊಟ್ಟೆಗಳನ್ನಿರಿಸಿದೆ
ನುಂಗಲು ಹಾವೊಂದನ್ನು ಬಿಟ್ಟು ಎಲ್ಲವನ್ನೂ
ಕೆಡಿಸಿದೆ
ಇದೆಲ್ಲಾ ಲೀಲಾ ವಿನೋದವೆಂದೆ
ಎಷ್ಟೆಂದರೂ ಇದು ನಿನ್ನ ರಾಜ್ಯ.

ಹರಿದಾಡಲು ಉರಗವನು ಬಿಟ್ಟೆ
ಮೇಲೆ ಎರಗಲು ಗಿಡುಗವನ್ನಿಟ್ಟೆ
ಹಸಿವಿನೊಳಗೆ ಉಸಿರನ್ನಿಟ್ಟೆ
ಒಂದರ ಹಿಂದೆ ಒಂದನು ಓಡಲು ಬಿಟ್ಟು
ಚಪ್ಪಾಳೆ ತಟ್ಟಿದೆ
ಎಷ್ಟೆಂದರೂ ಇದು ನಿನ್ನ ರಾಜ್ಯ.

ಅಣು ಅಣುವಿನಲ್ಲೂ ಸಾವಿರ ಸಂತತಿಯ
ಕನಸನ್ನಿಟ್ಟೆ
ಬದುಕ ಬೇಕು ಬದುಕಬೇಕು ಎಂಬ ಮಂತ್ರ
ದೀಕ್ಷೆಯನ್ನಿತ್ತು
ಮರಣದಂಡನೆಯ ಶಾಸನವನ್ನು ಬರೆದೆ
ಎಷ್ಟೆಂದರೂ ಇದು ನಿನ್ನ ರಾಜ್ಯ.

ನೀನು ಕರೆದಾಗ ತಪ್ಪದೆ ರಂಗ ಪ್ರವೇಶ
ಬೇಡವೆಂದಾಗ ತೆರೆಮರೆಗೆ ಸರಿತ
ಯಾಕೆಂದರೆ ಇದು ನಿನ್ನ ರಾಜ್ಯ.

- ಭಾಗ್ಯ ಜಯಸುದರ್ಶನ್

ವಿಚಾರ ದೀಪ್ತಿ

ಒಂದಾನೊಂದು ಕಾಲದಲ್ಲಿ ಪ್ರಾಣಿಗಳು ಸೇರಿ ತಮ್ಮ ಸಮಾಜದಲ್ಲಿ ಹೆಚ್ಚುತ್ತಿರುವ ಸಂಕೀರ್ಣತೆಯನ್ನು ಎದುರಿಸಲು ಸಾಧ್ಯವಾಗುವಂಥ ಒಂದು ನಿರ್ಣಾಯಕವಾದಂಥದನ್ನೇನಾದರೂ ಮಾಡಬೇಕೆಂದು ತೀರ್ಮಾನಿಸಿದವು. ಅವು ಒಂದು ಸಭೆ ನಡೆಸಿ ಶಾಲೆಯೊಂದನ್ನು ಪ್ರಾರಂಭಿಸಬೇಕೆಂದು ತೀರ್ಮಾನಿಸಿದವು. ಶಾಲಾ ಪಠ್ಯ ಕ್ರಮದಲ್ಲಿ ಓಡುವುದು, ಈಜುವುದು, ನೆಗೆಯುವುದು ಇತ್ಯಾದಿಗಳು ಇದ್ದವು. ಈ ಎಲ್ಲವೂ ಬಹಳಷ್ಟು ಪ್ರಾಣಿಗಳಲ್ಲಿ ಮೂಲ ಸ್ವಭಾವವೇ ಆಗಿದ್ದುದರಿಂದ ಎಲ್ಲ ಪ್ರಾಣಿಗಳೂ ಎಲ್ಲ ವಿಷಯಗಳನ್ನೂ ಕಲಿಯಲೇಬೇಕೆಂದು ಅವು ತೀರ್ಮಾನಿಸಿದವು.

ಬಾತುಕೋಳಿಯು ಈಜುವುದರಲ್ಲಿ ಪರಿಣಿತಿಯನ್ನು ಪಡೆದಿತ್ತು. ಅಷ್ಟೇ ಅಲ್ಲ ಅದು ತನ್ನ ಅಧ್ಯಾಪಕನಿಗಿಂತಲೂ ಹೆಚ್ಚು ಪ್ರವೀಣವಾಗಿತ್ತು; ಹಾರುವುದರಲ್ಲಿಯೂ ಒಳ್ಳೆ ಸಾಧನೆ ಮಾಡಿತ್ತು ಆದರೆ ಓಡುವುದರಲ್ಲಿ ಬಹಳ ಹಿಂದಿತ್ತು. ಆದ್ದರಿಂದ ಓಡುವುದನ್ನು ಅಭ್ಯಾಸ ಮಾಡುವುದಕ್ಕಾಗಿ ಶಾಲಾ ನಂತರವೂ ಇರಬೇಕೆಂದು ಅದಕ್ಕೆ ಹೇಳಲಾಯಿತು. ಓಡುವುದಕ್ಕೆ ಹೆಚ್ಚು ಸಮಯ ಸಿಗಲೆಂದು ಅದು ಈಜುವುದನ್ನು ನಿಲ್ಲಿಸಿತು. ಪರಿಣಾಮವಾಗಿ ಆ ಬಾತುಕೋಳಿಯ ಬಲೆಯಂತಿದ್ದ ಪಾದಗಳು ಬಹಳಷ್ಟು ಗಾಸಿಗೊಂಡವು. ಇದರ ಪರಿಣಾಮವಾಗಿ ಅದು ಸಾಮಾನ್ಯ ಈಜುಗಾರನಂತಾಯಿತು. ಆ ಶಾಲೆಯಲ್ಲಿ ಕನಿಷ್ಠ ಪ್ರಗತಿಯೂ ಮಾನ್ಯವಾಗಿದ್ದರಿಂದ ಸ್ವತಃ ಬಾತುಕೋಳಿಯೊಂದನ್ನು ಬಿಟ್ಟರೆ ಇನ್ನಾರೂ ಈ ಬಗ್ಗೆ ಚಿಂತಿತರಾದಂತೆ ಕಾಣಲಿಲ್ಲ. ಮೊಲ ಓಟದಲ್ಲಿ ತನ್ನ ತರಗತಿಗೇ ಪ್ರಥಮವಾಯಿತು. ಆದರೆ ಈಜುವುದನ್ನು ಅಭ್ಯಾಸ ಮಾಡುವುದಕ್ಕಾಗಿ ಅದು ಹೆಚ್ಚು ಸಮಯವನ್ನು ಉಪಯೋಗಿಸಿದ್ದರಿಂದ ತನ್ನ ಸ್ಥೈರ್ಯವನ್ನೇ ಕಳೆದುಕೊಳ್ಳಬೇಕಾಯಿತು.

ಅಳಿಲು ಹತ್ತುವುದರಲ್ಲಿ ಅತ್ಯುತ್ತಮವಾಗಿತ್ತು. ಆದರೆ ಹಾರುವ ತರಗತಿಯಲ್ಲಿ ಅದು ಮಾನಸಿಕ ಹಿಂಜರಿತ ಅನುಭವಿಸಿತು. ಇದಕ್ಕೆ ಕಾರಣ ಅಧ್ಯಾಪಕ. ಅಳಿಲಿಗೆ ಅವನು ಮರದ ಮೇಲಿಂದ ಅಲ್ಲ, ನೆಲದ ಮೇಲಿಂದ ಹಾರಲು ಕಲಿಯಬೇಕೆಂದು ಒತ್ತಾಯಿಸಿದ್ದರಿಂದ ಅಳಿಲಿನ ಮಾಂಸ ಖಂಡಗಳು ಬಿಗಿತಗೊಂಡವು. ಅಲ್ಲದೆ ಹತ್ತುವುದರಲ್ಲಿ 'ಸಿ' ಗ್ರೇಡನ್ನು, ಓಡುವುದರಲ್ಲಿ 'ಡಿ' ಗ್ರೇಡನ್ನು ಪಡೆಯುವಂತಾಯಿತು.

ಹದ್ದು ತನ್ನ ತರಗತಿಯಲ್ಲಿ ಶಿಸ್ತಿನ ಬಗ್ಗೆ ಅತ್ಯಂತ ಸಮಸ್ಯಾತ್ಮಕ ವಿದ್ಯಾರ್ಥಿಯಾಗಿತ್ತು. ಮರದ ಮೇಲೆ ಹತ್ತಿ ಕುಳಿತುಕೊಳ್ಳುವುದರಲ್ಲಿ ತರಗತಿಯಲ್ಲಿಯೇ ಪ್ರಥಮ ಸ್ಥಾನದಲ್ಲಿತ್ತು. ಆದರೆ ಅಲ್ಲಿ ಮರದ ತುದಿಯಲ್ಲಿ ಹತ್ತಿ ಕುಳಿತುಕೊಳ್ಳುವ ವಿಷಯದಲ್ಲಿ ತನ್ನದೇ ಆದ ಕ್ರಮ ಅನುಸರಿಸುವುದಾಗಿ ಅದು ಹಠ ಮಾಡುತ್ತಿತ್ತು. ಕಲಿಯುವುದರಲ್ಲಿ ನಿಧಾನವಾಗಿದ್ದವುಗಳು ಶಾಲೆಯಿಂದ ಹೊರಗೆ ಉಳಿದವು ಮತ್ತು ಶಿಕ್ಷಣ ಶುಲ್ಕವನ್ನು ಪಡೆಯುತ್ತಿರುವ ಕ್ರಮವನ್ನು ವಿರೋಧಿಸಿದವು. ಏಕೆಂದರೆ ಅಗೆಯುವುದು ಪಾಠ ಕ್ರಮದಲ್ಲಿ ಇಲ್ಲವೆಂಬುದು ಅವುಗಳ ದೂರಾಗಿತ್ತು. ತಮ್ಮ ಮಕ್ಕಳು ಬಿಲದಲ್ಲಿರುವುದನ್ನೇ ಅವು ಇಷ್ಟ ಪಟ್ಟವು. ನಂತರ ಅವು ನೆಲದ ಮೇಲಿರುವ ಹಕ್ಕಿಗಳ ಜೊತೆ ಸೇರಿ ಕೊನೆಯಲ್ಲಿ ಪರ್ಯಾಯ ಶಿಕ್ಷಣ ಕೊಡುವ ತಮ್ಮದೇ ಖಾಸಗಿ ಶಾಲೆಯೊಂದನ್ನು ಪ್ರಾರಂಭಿಸಿದವು.

ಮೇಲಿನ ದೃಷ್ಟಾಂತ ಕಥೆಯು ಶಿಕ್ಷಣದ ವಿಚಾರದ ಬಗ್ಗೆಯೇ ಗಂಭೀರ ಚಿಂತನೆಗಾಗಿ ಕರೆಕೊಡುತ್ತದೆ. ಪ್ರತಿಯೊಂದು ಮಗುವೂ ಗಣಿತ, ವಿಜ್ಞಾನ, ಇತಿಹಾಸ,ಕಲೆ, ಸಂಗೀತ ಮತ್ತು ಭಾಷೆಯನ್ನು ಕಲಿಯಲೇಬೇಕೆಂದು ಭಾವಿಸಲಾಗುತ್ತದೆ. ಸಾಮಾನ್ಯ ಮಗುವೊಂದು ಈ ಎಲ್ಲ ವಿಷಯಗಳಲ್ಲಿ ಆಸಕ್ತಿ ಹೊಂದಿರುವುದಿಲ್ಲವೆಂಬುದನ್ನು ಅರಿಯುವ ಕಾಲ ಬಂದಿದೆ. 'ಸ್ವತಂತ್ರವಾದ ಅವಧಿಯನ್ನು ಪಡೆಯಲು ಇಷ್ಟಪಡದ ಮಗುವನ್ನು ನಾವು ಇನ್ನೂ ಭೇಟಿ ಮಾಡಿಲ್ಲ. ನಾವು ಮಕ್ಕಳು ಕಲಿಯಬೇಕೆಂದು ಪುಸಲಾಯಿಸಿದಾಗ, ಬಲವಂತ ಮಾಡಿದಾಗ ಅವರು ಬೇರೆಯೇ ಪ್ರಕಾರದ ಶಿಕ್ಷಿತರಾಗಿ ಹೊರ ಬರುತ್ತಾರೆ. ಶಾಲೆ ಮತ್ತು ಕಾಲೇಜಿನಲ್ಲಿ ಸುಮ್ಮನೆ ಕಾಲ ಕಳೆದ ಪರಿಣಾಮವಾಗಿ ಅವರು ಮಂದಗತಿಯ ಕಛೇರಿ ಕೆಲಸಗಾರರು, ಕ್ರಿಯಾತ್ಮಕತೆಯಿಲ್ಲದ ಅಧ್ಯಾಪಕರು, ಮಧ್ಯಮ ದರ್ಜೆಯ ಅಭಿಯಂತರರು ಮತ್ತು ಯಾವ ದೂರದೃಷ್ಟಿಯೂ ಇಲ್ಲದ ಕೈಗಾರಿಕೆಗಳ ವ್ಯವಸ್ಥಾಪಕರಾಗುತ್ತಾರೆ. – ಎ.ಜಿ.

* * *

ಹಿಂಸೆ-ಅಹಿಂಸೆ ವಿಚಾರಗಳ ವೇದಿಕೆ ಸೆಪ್ಟಂಬರ್

-ಸುರೇಂದ್ರ ಕೌಲಗಿ

ಭಾರತ ದೇಶದ ಮಟ್ಟಿಗಂತೂ ವರ್ಷದ ಹನ್ನೆರಡು ತಿಂಗಳುಗಳಲ್ಲಿ ಸೆಪ್ಟೆಂಬರ್ ಮಾಹೆ ಅತಿ ಮಹತ್ವದ ತಿಂಗಳೆಂದು ಭಾವಿಸಬಹುದಾಗಿದೆ. ಬೇರೆ ತಿಂಗಳುಗಳಿಗೆ ರಾಜಕೀಯ ಘಟನೆಗಳಿಂದಾಗಿಯೊ, ಯಾವುದಾದರು ಮಹಾನ್ ವ್ಯಕ್ತಿಯ ಜನ್ಮದಿಂದಾಗಿಯೋ ಮಹತ್ವ ಇರಬಹುದು, ಆದರೆ ಮಾನವನ ಮನಸ್ಸಿನಲ್ಲಿಯ ಮೂಲ ಗುಣಗಳಾದ ಹಿಂಸೆ ಮತ್ತು ಅಹಿಂಸೆಗಳಿಗೆ ಜೀವನ ವ್ಯಾಪಾರದಲ್ಲಿ ನಿರ್ಣಾಯಕವಾದ ಸ್ಥಾನ ಕೊಡುವುದರ ಬಗ್ಗೆ ಅಥವಾ ಕೊಡದಿರುವುದರ ಬಗ್ಗೆ ಆಲೋಚಿಸಲು ರಾಷ್ಟ್ರೀಯ ವೇದಿಕೆಯನ್ನು ಭಾರತೀಯರಿಗೆ ಒದಗಿಸಿ ಕೊಟ್ಟ ತಿಂಗಳು ಸೆಪ್ಟಂಬರ್.

ಕಾಕತಾಳೀಯವೇನೋ ಎಂಬಂತೆ ಇಲ್ಲವೆ ನಾಗರಿಕತೆ ತನ್ನ ಭವಿಷ್ಯ ಬರೆದು ಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲೇನೋ ಎಂಬಂತೆ ಸೆಪ್ಟೆಂಬರ್ ಮಾಹೆ ಹಿಂಸಾವಿಚಾರಕ್ಕೂ, ಅಹಿಂಸಾ ವಿಚಾರಕ್ಕೂ ವೇದಿಕೆಯನ್ನು ಕಲಿಸಿಕೊಟ್ಟಿರುವುದು ಸೋಜಿಗದ ಸಂಗತಿಯಾದರೂ ಆ ವೇದಿಕೆಯ ಮೇಲಿನ ವಿಚಾರಗಳು ನಮ್ಮ ದಿನನಿತ್ಯದ ಇಂದಿನ ಜೀವನದಲ್ಲಿ ಸದಾ ಸವಾಲನ್ನೊಡ್ಡುತ್ತಿರುವುದಂತೂ ವಾಸ್ತವ. ನಮ್ಮೀ ಇಪ್ಪತ್ತೊಂದನೇ ಶತಮಾನವು ಹಿಂಸಾಚಾರದ ಶತಮಾನವೆಂದು ಇತಿಹಾಸದಲ್ಲಿ ದಾಖಲಾದರೆ ಆಶ್ಚರ್ಯಪಡಲಾಗದು. ಭಾರತವೂ ಪ್ರಪಂಚದ ಒಂದು ಭಾಗವಾಗಿರುವಾಗ ಹಿಂಸಾ ವಿಷಯಕ ವಿಚಾರಗಳಿಂದ ಹೇಗೆ ತಾನೆ ದೂರ ಉಳಿಯಬಲ್ಲದು? ಆದರೆ ಜೀವನದ ಯಾವುದೇ ಕ್ಷೇತ್ರದಲ್ಲಿಯ ಸಮಸ್ಯೆಗಳಿರಲಿ ಅವನ್ನು ಹಿಂಸೆಯ ಮೂಲಕ ಪರಿಹರಿಸುವುದಕ್ಕಿಂತ ಅಹಿಂಸೆಯ ಮೂಲಕ ಪರಿಹರಿಸಿಕೊಳ್ಳುವ ಉತ್ತರ ಹೆಚ್ಚು ಪರಿಣಾಮಕಾರಿ, ಹೆಚ್ಚು ತಾಳಿಕೆ-ಬಾಳಿಕೆಯುಳ್ಳದ್ದು, ಮಾನವ ಕುಲವನ್ನು ಸುಸಂಸ್ಕೃತಿಯತ್ತ ಕರೆದೊಯ್ಯುವಂಥಾದ್ದು ಎಂಬ ಆರ್ಷೆಯ ಮಾತು ದೃಢವಾಗಿ ದೇಶದ ಮುಂದೆ ಮಂಡಿಸಲ್ಪಟ್ಟಿದ್ದು ಈ ಸೆಪ್ಟೆಂಬರ್ ಮಾಹೆಯಲ್ಲಿ. ಆಸಕ್ತಿಯ ಮತ್ತು ಕುತೂಹಲದ ಮಾತೇನೆಂದರೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯ ಸಮಸ್ಯೆಗೆ ಉತ್ತರ ಹಿಂಸೆಯೇ ಎಂದು ದೃಢವಾಗಿ ಪ್ರತಿಪಾದಿಸುವವರ ಗುಂಪೊಂದು ದೇಶದ ರಾಜಕೀಯ ಕ್ಷಿತಿಜದ ಮೇಲೆ ಕಾಣಿಸಿಕೊಂಡದ್ದೂ ಈ ಸೆಪ್ಟಂಬರ್‌ನಲ್ಲಿಯೇ. ಹೀಗೆ ಭಾರತದ ಮುಂದೆ ಭಾರತದ ಮೂಲಕ ಜಗತ್ತಿನ ಮುಂದೆ ಸಮಸ್ಯೆಯ ಪರಿಹಾರದ ಆಯ್ಕೆಗೆ ಎರಡು ಮಾರ್ಗಗಳು ಮಂಡಿಸಲ್ಪಟ್ಟವು: ಒಂದು ಹಿಂಸೆ, ಇನ್ನೊಂದು ಅಹಿಂಸೆ.

ಈ ಎರಡೂ ಮಾರ್ಗಗಳು ಸೂಚಿಸಲ್ಪಟ್ಟದ್ದು ಇಬ್ಬರು ಮಹಾನ್ ದೇಶಾಭಿಮಾನಿಗಳಿಂದ. ಆ ಇಬ್ಬರ ಗುರಿಯೂ ಒಂದೇ ಆಗಿತ್ತು. ಅದುವೆ ಭಾರತದ ಸ್ವಾತಂತ್ರ್ಯ. ಭಾರತದ ಸ್ವಾತಂತ್ರ್ಯಕ್ಕಾಗಿ ಅಹಿಂಸಾಧಾರಿತ ಸಂಧಾನದ ಮಾರ್ಗ ನಿರರ್ಥಕವೆಂದು ಸಂಪೂರ್ಣವಾಗಿ ತ್ಯಜಿಸಿ ಪೂರ್ಣಪ್ರಮಾಣವಲ್ಲದ ಹಿಂಸಾ ಮಾರ್ಗವನ್ನು ಅನುಸರಿಸಬೇಕೆಂದು ಕರೆಕೊಟ್ಟವರು ಭಗತ್‌ಸಿಂಗ್; ಯಾವುದೇ ಶಸ್ತ್ರಾಸ್ತ್ರದ ಉಪಯೋಗದ

ಎಳ್ಳಷ್ಟೂ ಜ್ಞಾನವಿಲ್ಲದ ಮತ್ತು ಪೂರ್ಣವಾಗಿ ನಿಶಸ್ತ್ರಗೊಂಡಿದ್ದ ಭಾರತೀಯರು ಬಲಿಷ್ಠ ಮತ್ತು ಶಸ್ತ್ರಸಜ್ಜಿತ ಇಂಗ್ಲೀಷರ ಆಳ್ವಿಕೆಯಿಂದ ಬಿಡುಗಡೆ ಹೊಂದಲು ಪರಿಶುದ್ಧವಾದ ಅಹಿಂಸೆಯನ್ನು ಅನುಸರಿಸಬೇಕೆಂದು ಕರೆಕೊಟ್ಟವರು ಗಾಂಧೀ.

ಈಗ ದೇಶದಾದ್ಯಂತ ಭಗತ್‌ಸಿಂಗರ ಜನ್ಮ ಶತಮಾನೋತ್ಸವವನ್ನು ಆಚರಿಸಲಾಗುತ್ತಿದೆ. ಗಾಂಧೀಜಿ ಪ್ರತಿಪಾದಿಸಿದ್ದ ಸತ್ಯಾಗ್ರಹ ವಿಚಾರದ ಶತಮಾನೋತ್ಸವವನ್ನೂ ಆಚರಿಸಲಾಗುತ್ತಿದೆ. ಹೀಗೆ ಎರಡು ಪ್ರತ್ಯೇಕ ವಿಚಾರಧಾರೆಗಳ ಶತಮಾನೋತ್ಸವದ ತಿಂಗಳು ಸೆಪ್ಟಂಬರ್ ಆಗಿರುವುದರಿಂದಲೇ ಅದಕ್ಕೆ ವರ್ಷದ ಬೇರೆ ಹನ್ನೊಂದು ತಿಂಗಳುಗಳಿಗಿಂತ ಹೆಚ್ಚಿನ ಮಹತ್ವ ಬಂದಿರುವುದು.

ಭಗತ್‌ಸಿಂಗರು ಸ್ವಾತಂತ್ರ್ಯ ಪ್ರಾಪ್ತಿಗಾಗಿ ಪಿಸ್ತೂಲ್ ಹಿಡಿದರು; ಬಾಂಬ್ ಎಸೆದರು. ಸತ್ಯಾಗ್ರಹಿ ಗಾಂಧಿಯನ್ನು ಪಿಸ್ತೂಲೇ ಕೊನೆಯಲ್ಲಿ ಆಹುತಿ ತೆಗೆದುಕೊಂಡಿತು ಮತ್ತು ಬಾಂಬ್ ಪ್ರಾರ್ಥನಾ ಸಭೆಯಲ್ಲಿ ಧ್ಯಾನ ಮಗ್ನರಾಗಿದ್ದ ಗಾಂಧೀ ಸಭೆಯಲ್ಲಿ ಆಸ್ಫೋಟನಗೊಂಡಿತು. ಪಿಸ್ತೂಲಿನ ಗುಂಡಿನಿಂದ ನೆಲಕ್ಕುರುಳಿದ ಗಾಂಧೀಜಿಯವರ ಬಾಯಿಂದ "ಹೇ ರಾಮ್" ಎಂಬ ಶಬ್ದಗಳು ಹೊರಟವು; ಭಗತ್‌ಸಿಂಗ್ ನೇಣುಗಂಬಕ್ಕೆ ಹೋದಾಗ "ಇಂಕ್ವಿಲಾಬ್ ಜಿಂದಾಬಾದ್" (ಕ್ರಾಂತಿ ಚಿರಾಯುವಾಗಲಿ) ಎಂಬ ಘೋಷಣೆ ಕೂಗಿದರು. ಈ ಇಬ್ಬರೂ ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದರು. ದೇಶವಾಸಿಗಳು ಒಬ್ಬರನ್ನು ಮಹತ್ಮಾ ಎಂದು ಕರೆದರು; ಇನ್ನೊಬ್ಬರನ್ನು ಹುತಾತ್ಮ ಎಂದು ಕರೆದರು. ಮಹಾತ್ಮಾ ಮತ್ತು ಹುತಾತ್ಮ ಇವು ಕೇವಲ ವಿಶೇಷಣಗಳಾಗಿರದೆ ಎರಡು ಸ್ಪಷ್ಟ ವಿಭಿನ್ನ ವಿಚಾರಧಾರೆಯ ಸಂಕೇತವೂ ಆಗಿವೆ. ಆ ವಿಚಾರಧಾರೆಗಳಲ್ಲಿ ಆಯ್ಕೆಯನ್ನು ಮಾಡುವ ಕಾಲ ಈ ಇಪ್ಪತ್ತೊಂದನೇ ಶತಮಾನದ ಮುಂದಿದೆ. ಹುತಾತ್ಮ ಎಂಬ ವಿಶೇಷಣದ ಹಿಂದೆ ಇರುವ ಹಿಂಸೆಬೆರೆತ ಜೀವನಶೈಲಿ ನಮ್ಮದಾಗಬೇಕೋ ಅಥವಾ "ಮಹತ್ಮಾ" ಎಂಬ ವಿಶೇಷಣದ ಹಿಂದೆ ಇರುವ ಶುದ್ಧ ಅಹಿಂಸಾ ಜೀವನಶೈಲಿ ನಮ್ಮದಾಗಬೇಕೋ ಎಂಬುದನ್ನು ಆಯ್ಕೆ ಮಾಡಬೇಕಾದ ಸಂಧಿ ಕಾಲದಲ್ಲಿ ವಿಶ್ವ ಸಮಾಜ ನಿಂತಿದೆ. ಆದರೆ ಈ ಆಯ್ಕೆ ಸುಲಭವೆಂದು ಅನಿಸುತ್ತಿಲ್ಲ. ಏಕೆಂದರೆ ಇಂದಿನ ಸಮಾಜ ವ್ಯವಸ್ಥೆ ಯಾವ ರೀತಿ ರೂಪಗೊಳ್ಳುತ್ತಿದೆ ಎಂಬುದನ್ನು ನೋಡಿದರೆ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಹಿಂಸೆಯೇ ಉಪಾಯ ಎಂಬ ವಿಚಾರವನ್ನು ಪ್ರಬಲವಾಗಿ ಪ್ರತಿಪಾದಿಸಲಾಗುತ್ತಿದೆ. ಮನುಷ್ಯ ಮಾನಸಿಕವಾಗಿ ಈ ವಿಚಾರಕ್ಕೆ ಅಂಟಿಕೊಳ್ಳುವಂತೆ ಶಿಕ್ಷಣ ಕೊಡಲಾಗುತ್ತಿದೆ, ತರಬೇತಿ ಕೊಡಲಾಗುತ್ತಿದೆ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಹಿಂಸೆಯ ಪುಷ್ಠಿಗೆ ಬಳಸಿಕೊಳ್ಳಲಾಗುತ್ತಿದೆ, ಅಭಿವೃದ್ಧಿ ನೀತಿಯನ್ನು ಹಾಗೂ ವಿತ್ತೀಯ ನೀತಿಯನ್ನು ಹಿಂಸೆಯ ಅನಿವಾರ್ಯತೆಯತ್ತ ರೂಪಿಸಲಾಗುತ್ತಿದೆ. ಹುತಾತ್ಮನ ಜನ್ಮ ಶತಮಾನೋತ್ಸವ ಆಚರಣೆಯ ನೆಪದಲ್ಲಿ ಹಿಂಸೆಯನ್ನು ವೈಭವೀಕರಿಸಲಾಗುತ್ತಿದೆ; ತನ್ಮೂಲಕ ಹೊಸ ಪೀಳಿಗೆಯ ಯುವಕರು ಹಿಂಸಾ ಶಕ್ತಿಯತ್ತ ಮೋಹಗೊಳ್ಳುವಂತೆ ವ್ಯವಸ್ಥಿತವಾಗಿ ಪ್ರಯತ್ನ ನಡೆಯುತ್ತಿದೆ. ಈ ಒಂದು ಪ್ರಯತ್ನದಲ್ಲಿ ಭಾರತದ ಸ್ವಾತಂತ್ರ್ಯ ಮಹಾತ್ಮನಿಂದಲ್ಲ ಹುತಾತ್ಮನಿಂದ ದೊರೆಯಿತೆಂಬ ವಿಚಾರವನ್ನು ಎಳೆ ಮನಸ್ಸಿನಲ್ಲಿ ಬಿತ್ತಲಾಗುತ್ತಿದೆ. ಮಹಾತ್ಮನ ಅಹಿಂಸಾ ರಥ ಸ್ವಾತಂತ್ರ್ಯ ಸಮರದ ರಣರಂಗದಲ್ಲಿ ಮುಂದೆ ಓಡಲಾರದೆ ನಿಂತಾಗ ಅದನ್ನು

ಮುಂದೆ ಎಳೆದು ಗುರಿಯನ್ನು ತಲುಪಿಸಿದವರು ಹುತಾತ್ಮರು ಎಂಬ ಅರ್ಧ ಸತ್ಯವನ್ನು ಪೂರ್ಣಸತ್ಯವೆಂದು ಬಿಂಬಿಸಲಾಗುತ್ತಿದೆ. ಇಲ್ಲಿ ಈ ಮಾತನ್ನು ಗಮನಿಸಿ "ಅನೇಕ ಯುವಕರು ಗಾಂಧೀಜಿಯವರ ಮಾರ್ಗವನ್ನು ತೊರೆದರು. ಚಂದ್ರಶೇಖರ್ ಆಜ಼ಾದ್, ಜತಿನ್ ದಾಸ್, ಭಗತ್‌ಸಿಂಗ್ ಇವರೆಲ್ಲರು ತಮ್ಮ ಎಳೆವಯಸ್ಸಿನಲ್ಲಿ ಗಾಂಧೀಜಿಯವರನ್ನು ಅನುಸರಿಸಲು ಹೋಗಿ ಅವರ ನಿಲುವಿನಿಂದ ಬೇಸತ್ತು ದೂರ ಸರಿದವರೇ. ಹೊಸ ಮಾರ್ಗವನ್ನು ಅನ್ವೇಷಿಸಲು ಭಗತ್ ಸಜ್ಜಾದ." ಈ ಸಮಯದಲ್ಲಿ ಅವರ ಪ್ರಾಯ ೨೩ವರ್ಷ. ಈ ಮೊದಲು ಅವರು ಯಾವುದೇ ಸಾಮಾಜಿಕ ನಿರ್ಮಾಣದ ಕೆಲಸವನ್ನು ಮಾಡಿರಲಿಲ್ಲ. ಅವರು ಇನ್ನೂ ಜೀವನದ ಬಗ್ಗೆ ಏನನ್ನೂ ತಿಳಿಯದ ಯುವಕರಾಗಿದ್ದಾಗ ೫೦೦೦ ಮೈಲಿ ದೂರದ ಲಂಡನ್ನಿನಲ್ಲಿ ಕರ್ಜನ್ ವೈಲಿಯನ್ನು ಮದನ್‌ಲಾಲ್ ಧಿಂಗ್ರಾ ಪಿಸ್ತೂಲಿನಿಂದ ಕೊಲೆಗೈದುದರಿಂದ ಪ್ರಭಾವಿತರಾದರು. ಈ ಕೃತ್ಯದ ಸಾಧಕತೆ–ಬಾಧಕತೆಯನ್ನು ತಿಳಿಯದ ಹುತಾತ್ಮರು ತಮ್ಮ ಅಮೂಲ್ಯವಾದ ಇಡೀ ಜೀವನವನ್ನೇ ಪಿಸ್ತೂಲಿನ ಆರಾಧಕರಾಗಿ ಕಳೆದರು. ಧಿಂಗ್ರಾ ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡ ಹೇಳಿಕೆ ಎಷ್ಟು ಬಾಲಿಷ ಎಷ್ಟು ಪ್ರೌಢ ಎಂಬುದನ್ನು ವಾಚಕರೇ ತೀರ್ಮಾನಿಸಿಕೊಳ್ಳಬೇಕು. ಆ ಹೇಳಿಕೆ ಈ ರೀತಿ ಇತ್ತು. "ಯಾವ ದೇಶ ಸತತವಾಗಿ ಬಂದೂಕುಗಳಿಂದ ತುಳಿಯಲ್ಪಟ್ಟಿದೆಯೋ ಅದು ಸದಾ ಯುದ್ಧದ ಸನ್ನಿವೇಶದಲ್ಲಿಯೇ ಇರುತ್ತದೆ. ನಿರಾಯುಧವಾಗಿ ಇಡಲ್ಪಟ್ಟ ಜನಸಮುದಾಯ ಬಹಿರಂಗ ಯುದ್ಧದಲ್ಲಿ ತೊಡಗುವುದು ಅಸಾಧ್ಯವಾದುದರಿಂದಲೇ ನಾನು ಹಠಾತ್ ಅನಿರೀಕ್ಷಿತ ದಾಳಿಗೆ ಕೈ ಇಡಬೇಕಾಯಿತು. ಬಂದೂಕುಗಳೊಂದಿಗೆ ಯುದ್ಧ ಮಾಡುವುದು ಅಸಾಧ್ಯವಾದುದರಿಂದಲೇ ಪಿಸ್ತೂಲು ಹಾರಿಸಿದ್ದೇನೆ. ಭಾರತೀಯರಿಗೆ ಅಗತ್ಯವಿರುವ ಒಂದು ಪಾಠವೆಂದರೆ ಸಾಯುವುದು ಹೇಗೆ ಎಂಬುದು. ಇದನ್ನು ಕಲಿಸುವ ಅತ್ಯುತ್ತಮ ಮಾರ್ಗವೆಂದರೆ ನಾವೇ ಸತ್ತು ತೋರಿಸುವುದು."

ಧಿಂಗ್ರಾನ ಈ ದಾರಿ ಧೀರರ ದಾರಿ ಎಂದು ಭಾವಿಸಿ ಹುತಾತ್ಮರು ಅದನ್ನೇ ಆಯ್ದುಕೊಂಡ ಮಾದರಿ ಎಂದು ಹೇಳಲಾಗಿದೆ.

ಈಗ ಮಹಾತ್ಮರು ಸ್ವಾತಂತ್ರ್ಯ ಚಳುವಳಿಗಾಗಿ ಸತ್ಯಾಗ್ರಹವನ್ನು ಏಕೆ ಒಂದು ಅಸ್ತ್ರವನ್ನಾಗಿ ಆಯ್ಕೆ ಮಡಿಕೊಂಡರೆಂಬುದನ್ನು ತಿಳಿಯೋಣ. ಅವರು ಭಾರತಕ್ಕೆ ಬರುವ ಮುನ್ನ ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿಯ ಭಾರತೀಯರ ಗುಲಾಮಗಿರಿಯ ವಿರುದ್ಧ ಇಪ್ಪತ್ತೊಂದು ವರ್ಷಗಳ ಕಾಲ (೧೮೯೩–೧೯೧೪) ಅಹಿಂಸಾತ್ಮಕ ತಂತ್ರದ ಮೂಲಕ ಹೋರಾಟ ನಡೆಸಿ ಅಲ್ಲಿಯ ಭಾರತೀಯರ ಹಿತಕ್ಕೆ ವಿರುದ್ಧವಾಗಿದ್ದ ಅನೇಕ ಕರಾಳ ಶಾಸನಗಳು ರದ್ದಾಗುವಂತೆ ಮಾಡಿದ್ದರು. ಮುಂದೆ ಭಾರತದಲ್ಲಿಯೂ ಸತ್ಯಾಗ್ರಹ ತಂತ್ರವನ್ನು ಉಪಯೋಗಿಸಿ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಮತ್ತು ಭಾರತದಲ್ಲಿ ಜನರು ಸಂಪೂರ್ಣವಾಗಿ ನಿಃಶಸ್ತ್ರೀಕರಣಗೊಂಡಿದ್ದರು. ಆದರೆ ಸರ್ಕಾರ ಮಾತ್ರ ತನ್ನ ಗಂಟಲವರೆಗೆ ಶಸ್ತ್ರ ಸನ್ನದ್ಧವಾಗಿತ್ತು. ಒಂದು ಕಡೆ ಪಾಶವೀಶಕ್ತಿ, ಇನ್ನೊಂದು ಕಡೆ ಪಾಶವೀಶಕ್ತಿಗೆ ಬಲಿಯಾಗಲೆಂದೇ ನಿಂತಿದ್ದ ನಿತ್ರಾಣಗೊಂಡ ಮೂವತ್ತು ಮೂರು ಕೋಟಿ ಜನ. ಇಷ್ಟು ದುರ್ಬಲವಾದ ಜನರಲ್ಲಿ ಸತ್ಯಕ್ಕಾಗಿಯೇ ಹೋರಾಟ ಮಾಡುತ್ತ ಸಾಯುವುದಕ್ಕೆ ಧೈರ್ಯ ತುಂಬ ಬೇಕಿತ್ತು. ಆ ಸತ್ಯ ಬೇರೇನೂ

ಆಗಿರದೆ ಸ್ವಾತಂತ್ರ್ಯವಾಗಿತ್ತು. ಕೋಟಿ-ಕೋಟಿ ಜನರ ಕೈಗೆ ಕೋವಿ ಕೊಡುವುದಾಗಲೀ, ಪಿಸ್ತೂಲು ಕೊಡುವುದಾಗಲೀ ಮತ್ತು ಅವರಿಗೆ ಅವುಗಳ ಉಪಯೋಗದ ಬಗ್ಗೆ ತರಬೇತಿ ಕೊಡುವುದಾಗಲೀ ಆ ಕಾಲದಲ್ಲಿ ಅಸಾಧ್ಯದ ಮಾತಾಗಿತ್ತು. ಆದರೆ ಹೋರಾಟ ಅನಿವಾರ್ಯವಾಗಿತ್ತು. ಭಾರತೀಯರನ್ನು ಕೆಚ್ಚೆದೆಯವರನ್ನಾಗಿ ಮಾಡಲು ಸತ್ಯಾಗ್ರಹದ ತಂತ್ರ ಸಿದ್ಧವಾಗಿತ್ತು. ಸತ್ಯಾಗ್ರಹದ ತಂತ್ರವನ್ನು ಆಗಿನ ಪರಿಸ್ಥಿತಿಯಲ್ಲಿ ಭಾರತೀಯರಿಗೆ ತಿಳಿ ಹೇಳುವುದು ಕಷ್ಟ ಸಾಧ್ಯವಾಗಿದ್ದರೂ ಅದೊಂದೇ ಇದ್ದ ಮಾರ್ಗವಾಗಿತ್ತು. ಹಿಂಸೆಯಲ್ಲಿ ಭಾರತೀಯರನ್ನು ತೊಡಗಿಸುವುದು ಸುಲಭವಾಗಿರಲಿಲ್ಲ. ಇದಕ್ಕೆ ಇನ್ನೊಂದು ಮಹತ್ವದ ಕಾರಣವಿದೆ. ಭಾರತದ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಹಿಂಸೆಗಿಂತ ಅಹಿಂಸೆಗೆ ಹೆಚ್ಚು ಒತ್ತು ಕೊಡುತ್ತ ಬರಲಾಗಿದೆ. ಈ ಸಂಸ್ಕೃತಿಯಲ್ಲಿ ಬೆಳೆದು ಬಂದ ಭಾರತೀಯರಿಗೆ ದುರಾಗ್ರಹಕ್ಕಿಂತ ಸತ್ಯಾಗ್ರಹದ ವಿಚಾರ ಅವರ ಹೃದಯಕ್ಕೆ ಹೆಚ್ಚು ಹತ್ತಿರವಾಗುವುದು ಸಾಧ್ಯವಿತ್ತು. ಅಲ್ಲದೆ, ಭಾರತ ಎಂದೂ ಪರದೇಶಗಳ ಮೇಲೆ ಆಕ್ರಮಣ ಮಾಡುವ ವಿಚಾರವನ್ನೇ ಇಟ್ಟುಕೊಂಡಿದ್ದಿಲ್ಲ. ಈ ಮಾತು ಇಂದೂ ವಾಸ್ತವವಾಗಿದೆ. ಯಾವಾಗ ಪರ ದೇಶಗಳ ಮೇಲೆ ದಾಳಿಯ ವಿಚಾರವೇ ಇರಲಿಲ್ಲವೋ ಆಗ ಸಹಜವಾಗಿ ಅದಕ್ಕೆ ಸಂಬಂಧಿಸಿದ ಯುದ್ಧ ಉಪಕರಣಗಳು, ತಂತ್ರಜ್ಞಾನ ಭಾರತದಲ್ಲಿ ರೂಪಗೊಳ್ಳಲೇ ಇಲ್ಲ. ಆದ್ದರಿಂದ ಗಾಂಧೀ ದ.ಆಫ್ರಿಕಾದಿಂದ ತಮ್ಮ ಅಲ್ಲಿಯ ಸತ್ಯಾಗ್ರಹದ ಹೋರಾಟದ ಅನುಭವದೊಂದಿಗೆ ಸ್ವದೇಶಕ್ಕೆ ಹಿಂದಿರುಗಿದಾಗ ಭಾರತವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧಗೊಳಿಸಲು ಅವರಿಗೆ ಸತ್ಯಾಗ್ರಹದ ತಂತ್ರ ಸುಲಭವಾಗಿ, ಸಹಜವಾಗಿ, ಅನಿವಾರ್ಯವಾಗಿ, ಹಿಂಸೆಗೆ ಪರ್ಯಾಯವಾಗಿ ಒದಗಿ ಬಂತು. ಆಗ ಭಾರತದ ಸ್ವಾತಂತ್ರ್ಯ ಚಳುವಳಿಯ ಕ್ಷೇತ್ರದಲ್ಲಿ ಜನಾನುರಾಗಿಯಾಗಿದ್ದಂಥ ಮತ್ತು ಹೆಚ್ಚು ಜನ ಒಪ್ಪುವಂಥ ನಾಯಕರಾರೂ ಇರಲಿಲ್ಲ. ಆಗ ಹುತಾತ್ಮರ ವಿಚಾರ ಸರಣಿಯ ಗುಂಪು ರಚಿತಗೊಂಡಿರಲಿಲ್ಲ. ಮಹಾತ್ಮರು ಸತ್ಯಾಗ್ರಹ ತಂತ್ರದ ಮೂಲಕ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆದು ಜನ ಜಾಗೃತಿ ಮಾಡಿದ್ದರಿಂದಲೇ ಹುತಾತ್ಮರಿಗೆ ಬೇರೊಂದು ದಾರಿಯ ಬಗ್ಗೆ ಆಲೋಚಿಸಲು ಸಹಾಯಕವಾಯಿತು. ಇದೇ ಹೊತ್ತಿನಲ್ಲಿ ಮಹಾತ್ಮರು ತಮ್ಮ ಸತ್ಯಾಗ್ರಹದ ಚಿಂತನೆಯಲ್ಲಿ ಎಷ್ಟು ಮುಂದೆ ಹೋಗಿದ್ದರೆಂದರೆ ಸಾತ್ವಿಕ ಪ್ರತಿಭಟನೆಯ ವಿಧಾನವೂ ಅವರಿಗೆ ತ್ಯಾಜ್ಯವಾಗಿ ಕಂಡು ಬಂದಿತು. ಅವರು ಶುದ್ಧತೆಯಿಂದ, ಪರಿಶುದ್ಧತೆಯತ್ತ ಪಯಣಿಸುತ್ತಿದ್ದರು. ಈ ಬಗ್ಗೆ ಅವರ ಮಾತುಗಳು ಹೀಗಿವೆ, "ಸಾತ್ವಿಕ ಪ್ರತಿಭಟನೆಯಲ್ಲಿ ಶಸ್ತ್ರವನ್ನು ಉಪಯೋಗಿಸಲು ಅವಕಾಶವಿದೆ. ಸತ್ಯಾಗ್ರಹದಲ್ಲಾದರೋ ಅತ್ಯಂತ ಅನಕೂಲ ಸಂದರ್ಭದಲ್ಲಿಯೂ ಪಾಶವೀಶಕ್ತಿ ತ್ಯಾಜ್ಯ, ನಿಷಿದ್ಧ." ಇಂಥ ನಿಲುವಿಗೆ ಮಹಾತ್ಮರು ಬಂದು ಸತ್ಯಾಗ್ರಹದ ಘೋಷಣೆ ಮಾಡಿದಾಗ ಅವರು ಮೂವತ್ತೈದು ವರ್ಷದ ಯುವಕ; ಪಾರ್ಲಿಮೆಂಟಿನಲ್ಲಿ ಸಾರ್ವಜನಿಕ ಭದ್ರತಾ ಮಸೂದೆಯನ್ನು ಮಂಡಿಸುವ ವೇಳೆಯಲ್ಲಿ ತಮ್ಮ ಹೋರಾಟದ ಸದ್ದು ಕಿವುಡರಿಗೆ ಕೇಳುವಂತೆ ಮಾಡಲು ದೊಡ್ಡ ಸದ್ದೇ ಬೇಕು "ಎಂಬ ಉದ್ದೇಶದಿಂದ ಯಾವ ಸ್ಥಳದಲ್ಲಿ ಬಿದ್ದರೆ ಯಾರಿಗೂ ತೊಂದರೆಯಾಗಲಾರದೋ ಅಂಥ ಸ್ಥಳದಲ್ಲಿ ಬಾಂಬ್ ಎಸೆದು, ಹಾಗೂ ಫ್ರಾನ್ಸ್‌ನ ಅರಾಜಕತಾವಾದಿಯ ವೇಲಿಯನ್ನನ ಮಾತುಗಳು ಇರುವ ಕರಪತ್ರಗಳನ್ನು ತೂರಿದಾಗ

ಹುತಾತ್ಮರು ಇಪ್ಪತ್ತೆರಡು ವರ್ಷದ ಪ್ರಾಯದವರು.

ಮಹಾತ್ಮಾ ಮತ್ತು ಹುತಾತ್ಮಾ ಇಬ್ಬರೂ ಯುವಕರಾಗಿದ್ದಾಗಲೇ ಎರಡು ವಿಭಿನ್ನವಾದ ವಿಚಾರಮಾರ್ಗ ಹಿಡಿದು ದೇಶದ ಸ್ವಾತ್ರಂತ್ರ್ಯಾಂದೋಲನವನ್ನು ನಡೆಸಿದರು.

ಈಗಾಗಲೇ ತಿಳಿಸಿರುವಂತೆ ಒಬ್ಬರದು ಹಿಂಸಾ ಮಾರ್ಗ; ಇನ್ನೊಬ್ಬರದು ಅಹಿಂಸಾ ಮಾರ್ಗ. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯವಾದ ಮಾತೇನೆಂದರೆ ಅವೆರಡು ಮಾರ್ಗಗಳಲ್ಲಿ ಭಾರತ ಸ್ವತಂತ್ರವಾದ ಮೇಲೂ ಯಾವ ಮಾರ್ಗವನ್ನು ಹಿಡಿಯುವುದು? ದೇಶಕ್ಕೂ, ಜಗತ್ತಿಗೂ ಪ್ರಶಸ್ತವೆನ್ನುವುದು ಯಾವುದು? ಈ ಪ್ರಶ್ನೆಗೆ ಮಹಾತ್ಮರು ನಿಃಸಂದಿಗ್ಧವಾದ ಉತ್ತರವನ್ನು ಹೊಂದಿದ್ದರು. ಆ ಉತ್ತರ ಸ್ವತಂತ್ರ ಭಾರತದಲ್ಲಿಯೂ ಅಹಿಂಸೆಯೊಂದಿಗಿನ ತಮ್ಮ ಮೂರು ದಶಕಗಳ ಪ್ರಯೋಗ ಮುಂದುವರೆಯಬೇಕು." ಈ ಸಂಬಂಧದಲ್ಲಿ ಹುತಾತ್ಮರ ಉತ್ತರ ಸಹ ಒಂದು ಅರ್ಥದಲ್ಲಿ ಅಸಂದಿಗ್ಧವಾಗಿಯೇ ಇತ್ತು ಎಂದು ಹೇಳಬಹುದು. "ಸ್ವತಂತ್ರ ಭಾರತದ ಜನತೆ ಸಾಮಾಜಿಕ ಸಮಾನತೆಯ ಹೆಸರಿನಲ್ಲಿ, ಬಂಡವಾಳಶಾಹಿಗಳ ವಿರುದ್ಧದ ಹೋರಾಟದಲ್ಲಿ, ರಾಜ್ಯಶಕ್ತಿಯ ದಮನದ ವಿರುದ್ಧದ ಹೋರಾಟದಲ್ಲಿ ತುಳಿದ ಗಲ್ಲುಗಂಬಿನತ್ತದ ದಾರಿಯಲ್ಲಿಯೇ ಯುವಕರು ನಡೆಯಬೇಕು. ಗಲ್ಲುಗಂಬಕ್ಕೇರುವುದೇ ಮಹಾತ್ಯಾಗ; ನೇಣು ಹಗ್ಗವನ್ನು ಹೂ ಮಾಲೆಯಂತೆ ಧರಿಸಿಕೊಂಡವನೇ ನಿಜ ಕ್ರಾಂತಿಕಾರಿ. ಎಂಬ ಸಂದೇಶ ಹುತಾತ್ಮರದಾಗಿತ್ತು.

ಮಹಾತ್ಮರು ಸಹ ಚಳುವಳಿಯ ಸಂದರ್ಭದಲ್ಲಿ "ಮಾಡು ಇಲ್ಲವೆ ಮಡಿ" ಎಂಬ ಘೋಷಣೆ ಕೊಟ್ಟಿದ್ದರು. ಅಲ್ಲದೆ, ನಿಜ ಯೋಧ ಯಾರು ಎಂಬುದನ್ನು ಈ ರೀತಿ ವ್ಯಾಖ್ಯಾನಿಸಿದ್ದರು. "ಫಿರಂಗಿಯ ಹಿಂದುಗಡೆ ಕುಳಿತು ಇತರರನ್ನು ಛಿದ್ರ ಛಿದ್ರವಾಗುವಂತೆ ಹೊಡೆಯುವುದು ಧೈರ್ಯವೋ ಅಥವಾ ಅದೇ ಫಿರಂಗಿಯನ್ನು ನಗುಮುಖದಿಂದ ಎದುರಿಸಿ ಛಿದ್ರವಾಗುವುದು ಧೈರ್ಯವೋ, ಯೋಚಿಸಿ ನೋಡಿ. ಯಾರು ನಿಜ ಯೋಧ? ಸಾವನ್ನು ಆತ್ಮೀಯ ಗೆಳೆಯನಂತೆ ಭಾವಿಸುವವನೊ ಅಥವಾ ಇತರರ ಸಾವಿಗೆ ಕಾರಣನಾಗುವವನೋ? ಧೈರ್ಯ ಪೌರುಷಗಳಿಲ್ಲದವನು ಎಂದಿಗೂ ಸಾತ್ವಿಕ ಪ್ರತಿಭಟನಾಕಾರನಾಗಲಾರ. ಮಾನಸಿಕ ನಿಗ್ರಹವೊಂದೇ ಆವಶ್ಯಕ. ಅದು ಸಾಧಿತವಾದರೆ ವ್ಯಕ್ತಿ ಮೃಗರಾಜನಂತಾಗುತ್ತಾನೆ. ಅವನ ನೋಟವೇ ಶತ್ರುವನ್ನು ಕುಂದಿಸುತ್ತದೆ."

ಮಹಾತ್ಮರು ಹೇಳಿದಂಥ ಈ ದಿಟ್ಟ ಮಾತನ್ನು ಹುತಾತ್ಮರು ಹೇಳಬಹುದೆ? "ಸತ್ಯ-ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು; ಸಮಾಜ ಸಮುದಾಯಗಳು, ರಾಷ್ಟ್ರಗಳೂ ಕೂಡ ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಹೇಗೆ ಆಗಲಿ, ಅದಂತೂ ನನ್ನ ಕನಸು. ನನ್ನ ಸಾವೂ ಅದಕ್ಕಾಗಿಯೇ."

ಈಗ ಜಗತ್ತಿನ ಮುಂದಿನ ಆಯ್ಕೆ ಹುತಾತ್ಮರ ಮಾರ್ಗವೇ ಅಥವಾ ಮಹಾತ್ಮರ ಮಾರ್ಗವೇ?

* * *

ವೇದದಲ್ಲಿ ಅಗ್ನಿಯ ವಿಚಾರ

- ವಿನೋಬಾ

ಅಗ್ನಿಯ ಶೋಧ ಭಾರತದಲ್ಲಾಯಿತು. ಅಗ್ನಿಯನ್ನು ಕುರಿತು ಅನೇಕ ಮಂತ್ರಗಳಿವೆ. ಅವುಗಳಲ್ಲಿ ಒಂದು ಮಂತ್ರ ಹೀಗಿದೆ- **ತ್ವಂ ನೊ ಅಸಿ ಭಾರತ!** (೨.೧.೧೩) ಹೇ ಭಾರತ ಅಗ್ನೆ! ನೀನು ನಮ್ಮವನಾಗಿದ್ದಿಯೆ. ಅಗ್ನಿಯನ್ನು "ಹೇ ಭಾರತ!" ಎಂದು ಕರೆಯಲಾಗಿದೆ. ಪ್ರಾಚೀನ ಕಾಲದಲ್ಲಿ ಯಜ್ಞದ ಸಂಬಂಧವನ್ನು ಅಗ್ನಿಯೊಂದಿಗೆ ಮಾಡಲಾಗಿತ್ತು. ಅಗ್ನಿ ನಿರ್ಮಿಸುವ ಯುಕ್ತಿ ಮನುಷ್ಯನಿಗೆ ದೊರೆತಾಗ ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಸೂರ್ಯ ಮುಂತಾದ ದೇವತೆಗಳು ಪ್ರಕೃತಿಯಿಂದಲೇ ಪ್ರಾಪ್ತವಾಗಿವೆ. ಅಗ್ನಿ ದೇವತೆಯನ್ನು ನಾವು ನಮ್ಮ ಕೃತಿಯ ಮೂಲಕ ಸಂಪಾದಿಸಿದ್ದೇವೆಂಬ ಧನ್ಯತೆ ಮನುಷ್ಯನಿಗೆ ಅನುಭವವಾಯಿತು.

ಅಗ್ನಿಯತ್ತ ಅವನು ಗೌರವಯುತ ಆಧ್ಯಾತ್ಮಿಕ ದೃಷ್ಟಿಯಿಂದ ನೋಡತೊಡಗಿದ. ಅನ್ನವನ್ನು ಬೇಯಿಸುವವ "ಗೃಹಪತಿ," ಕಸವನ್ನು ಸುಟ್ಟು ಹಾಕುವವನು "ಪಾವಕ," ಶೀತವನ್ನು ಮತ್ತು ರೋಗವನ್ನು ಹೋಗಲಾಡಿಸುವವ "ಭಿಸಜ" (ವೈದ್ಯ) ಆಹಾರವನ್ನು ಜೀರ್ಣಿಸುವವ "ವೈಶ್ವಾನರ". ವಸತಿ ಸ್ಥಾನದ ದೇವತೆ, ಕರ್ಮಯೋಗದ ರೂಪಕ, ಪ್ರತಿಜ್ಞೆಯ ಸಾಕ್ಷಿ, ವೈರಾಗ್ಯದ ಮೂರ್ತಿ ಇತ್ಯಾದಿ ಅನೇಕ ಭಾವನೆಗಳಿಂದ ಮನುಷ್ಯ ಗೌರವಿಸಿದ. ಅಗ್ನಿಯ ಜ್ವಾಲೆ ಸತತವಾಗಿ ಮೇಲೆ ಹೋಗುತ್ತದೆ, ಈಶ್ವರನೊಂದಿಗೆ ಸೇರಬೇಕೆಂಬ ಜೀವಾತ್ಮದ ಚಡಪಡಿಕೆ ಮನುಷ್ಯನಿಗೆ ಅಗ್ನಿಯಲ್ಲಿ ಕಾಣಿಸಿತು. ಆ ಕಾಲದಲ್ಲಿ ಎಲ್ಲೆಡೆ ಕಾಡೇ ಕಾಡಿತ್ತು. ಕೋತಿಗಳು ಈ ಮರದಿಂದ ಆ ಮರಕ್ಕೆ ಹೋಗುತ್ತಿದ್ದವು. ಅವು ಕೆಳಗಿಳಿಯಲೇ ಬೇಕಾಗಿರಲಿಲ್ಲ. ಹೀಗೆ ಅದು "ಅಸೂರ್ಯ ಪಸ್ಯ"ವಾದ ದಟ್ಟ ಕಾಡಾಗಿತ್ತು. ಅಲ್ಲಿ ಎಂದೂ ಸೂರ್ಯನ ದರ್ಶನವೇ ಆಗುತ್ತಿರಲಿಲ್ಲ. ಅಂಥ ಕಾಡಿನಲ್ಲಿ ಜನರನ್ನು ನೆಲೆಸಿಸಬೇಕಾಯಿತು. ಆಗ ಬೆಂಕಿಯನ್ನು ಹಚ್ಚ ಬೇಕಾಗುತ್ತಿತ್ತು. ಬೆಂಕಿ ಮೆಲ್ಲ ಮೆಲ್ಲಗೆ ಮುಂದುವರಿಯುತ್ತಿತ್ತು ಮತ್ತು ಕಾಡುಗಳನ್ನು ಸ್ವಚ್ಛಮಾಡುತ್ತಾ ಹೋಗುತ್ತಿತ್ತು. ಆದ್ದರಿಂದ ಅಗ್ನಿಯನ್ನು ದೇವತೆಗಳ ಅಗ್ರಣಿ ಎಂದು ಹೇಳಲಾಗುತ್ತದೆ. ಆ ಕಾಲದ ದಟ್ಟ ಕಾಡನ್ನು ಸುಟ್ಟು ಹಾಕಿ ನಿವಾಸ ಸ್ಥಾನವನ್ನು ಮಾಡುವ ಅಗ್ನಿ ಅಗ್ರಗಾಮಿ, ಅಗ್ರಣಿ ಆಯಿತು. ಈಶಾವಾಸ್ಯ ಉಪನಿಷತ್ ಹೇಳುತ್ತದೆ- **ಅಗ್ನೆ ನಯ ಸೂಪತ ರಾಯೆ ಅಸ್ಮಾನ್**- ಹೇ ಅಗ್ನಿ ದೇವ, ನಮ್ಮನ್ನು ಸುಲಭ ಮಾರ್ಗದಿಂದ ಪರಮಾನಂದದ ಕಡೆಗೆ ಕರೆದುಕೊಂಡು ಹೋಗು. ಪ್ರಸ್ತುತ ಮಂತ್ರದಲ್ಲಿ ಅಗ್ನಿ ಅಗ್ರಣಿ ಎಂಬುದು ನಿರುಕ್ತಿ ಎಂದೆನಿಸುತ್ತದೆ ಏಕೆಂದರೆ ಅಗ್ನಿಯಿಂದ ಮಾರ್ಗದರ್ಶನದ ಅಪೇಕ್ಷೆಯನ್ನಿರಿಸಿಕೊಳ್ಳಲಾಗಿದೆ. ಈ ಎಲ್ಲ ಬಗೆಯ ಅಗ್ನಿ ದರ್ಶನ ವೇದದಲ್ಲಿದೆ.

ವ್ಯುತ್ಪತ್ತಿ-ಶಾಸ್ತ್ರದ ಅನುಸಾರ "ಅಂಜ್" (ಅಂದರೆ ವ್ಯಕ್ತವಾಗುವುದು,

ಪ್ರಕಾಶಿತವಾಗುವುದು) ಎಂಬ ಧಾತುವಿನಿಂದ ಅಗ್ನಿ ಶಬ್ದ ರಚನೆಯಾಗಿದೆ ಮತ್ತು ವಿಭಿನ್ನ ಅಪಭ್ರಂಶ ರೂಪಗಳಲ್ಲಿ ಅನೇಕ ಭಾಷೆಗಳಲ್ಲಿ ಅದು ಪ್ರಚಲಿತವಿದೆ. ಏನೆಲ್ಲ ಪ್ರಕಟವಾಗಿದಿಯೊ ಅದೆಲ್ಲವನ್ನೂ ಅಗ್ನಿಯ ರೂಪವೆಂದು ತಿಳಿಯಬೇಕಿದೆ. ಇದಕ್ಕೆ ಅತಿರಿಕ್ತವಾಗಿ ಅಗ್ನಿಯು ಪ್ರಕಾಶಕವಾಗಿರುವುದರಿಂದ ಜ್ಞಾನ ಸ್ವರೂಪವೆಂದೂ ತಿಳಿಯಾಲಾಗಿದೆ. ಆದ್ದರಿಂದ ವೇದಗಳಲ್ಲಿ ಅಗ್ನಿಗೆ "ಜಾತ- ವೇದಸ್" ಎಂದು ಹೇಳಲಾಗಿದೆ. ಅರ್ಥಾತ್ ಅಗ್ನಿಯೆಂದರೆ ವಿಶ್ವರೂಪದಿಂದ ವ್ಯಕ್ತವಾಗಿರುವ, ವಿಶ್ವದ ತತ್ವವನ್ನು ತಿಳಿದಿರುವ, ವಿಶ್ವದ ಮಾರ್ಗದರ್ಶಕ "ಸಗುಣ ಸಾಕಾರ" ಪರಮೇಶ್ವರ.

ವೇದಾರ್ಥ ಮೀಮಾಂಸೆಯಲ್ಲಿ ಆಚಾರ್ಯ ಜೈಮಿನಿಯವರು ಅಗ್ನಿವಾಚಕ ವೈಶ್ವಾನರ ಶಬ್ದದ ಚರ್ಚೆ ಮಾಡುವ ಸಮಯದಲ್ಲಿ ಆ ಶಬ್ದದ ಅಕ್ಷರಾರ್ಥಕ್ಕಿಂತಲೂ ಸಾಕ್ಷಾತ್ ಈಶ್ವರವಾಚಕವೆಂದು ತಿಳಿದರೆ ಯಾವ ಆಕ್ಷೇಪಣೆಯೂ ಇಲ್ಲ ಎಂದು ಸೂಚಿಸಿದ್ದಾರೆ. ವಶಿಷ್ಟ ಋಷಿಯು ಅಗ್ನಿಯ ವರ್ಣನೆಯನ್ನು ದೂರೆ ದೃಶಮ್ ಗೃಹಪತಿಂ (೭.೧.೧) ಎಂಬ ಈ ಶಬ್ದಗಳಲ್ಲಿ ಮಾಡಿದ್ದಾರೆ. ದೂರೆ ದೃಶಮ್ ಎಂದರೆ ನೋಡುವವ. ಅಗ್ನಿ ದೂರದೃಷ್ಟಿ ಬೀರುತ್ತದೆ. ಆದರೆ ಮನೆಯ ಅಡಿಗೆಯನ್ನು ಮಾಡುವುದರಿಂದ ಗೃಹಪತಿ. ಇದರಲ್ಲಿ ಋಷಿ ಅಗ್ನಿಯ ಎರಡು ಗುಣಗಳನ್ನು ಪ್ರಥಕರಣ ಮಾಡಿದ್ದಾರೆ. ಒಂದು ಪ್ರಕಾಶ; ಎರಡನೆಯದು ಉಷ್ಣತೆ. ಪ್ರಕಾಶ ವ್ಯಾಪಕವಾಗಿದೆ. ಉಷ್ಣತೆ ವಿಶಿಷ್ಟವಾಗಿದೆ. ಎದುರಿಗಿನ ಬೆಟ್ಟಕ್ಕೆ ಬೆಂಕಿ ಬೀಳುತ್ತದೆ. ಅದು ದೂರದಿಂದ ಕಾಣುತ್ತದೆ. ಆದರೆ ಬೆಂಕಿಯ ಬಿಸಿ ದೂರದಿಂದ ಅನುಭವಕ್ಕೆ ಬರುವುದಿಲ್ಲ. ವಸ್ತುತಃ ಪ್ರಕಾಶಕ್ಕೂ ಕೂಡ "ಹತ್ತಿರದಿಂದ ದೂರ" ಎಂಬ ನಿಯಮ ಅನ್ವಯಿಸಿಯೇ ಇದೆ. ಆದರೆ ತುಲನಾತ್ಮಕ ದೃಷ್ಟಿಯಿಂದ ಪ್ರಕಾಶ ವ್ಯಾಪಕ, ಉಷ್ಣತೆ ವಿಶಿಷ್ಟ ಎಂದು ಹೇಳುವುದರಲ್ಲಿ ಯಾವ ತೊಡಕೂ ಇಲ್ಲ. ಅಗ್ನಿ ಯಾವುದೇ ಪ್ರಕಾರ ದೂರದೃಷ್ಟಿ ಬೀರಿದರೂ ಒಲೆಯ ಮೇಲಿರುವುದನ್ನೇ ಬೇಯಿಸುತ್ತದೆ. ಹೀಗೆ ದೃಷ್ಟಿ ತ್ರಿಭುವನ ವ್ಯಾಪಕವಾಗಿರುವಂತೆ ಪ್ರತ್ಯಕ್ಷ ಕಾರ್ಯ ಮೂರುವರೆ ಮೊಳ ದೇಹದ ಸುತ್ತಮುತ್ತಲೇ!

ಅಗ್ನಿಗೆ ಎರಡು ಶಕ್ತಿಗಳಿವೆಯೆಂದು ತಿಳಿಯಲಾಗಿದೆ. ಒಂದು "ಸ್ವಾಹ", ಇನ್ನೊಂದು "ಸ್ವಧ". ಈ ಎರಡು ಶಕ್ತಿಗಳೆಲ್ಲಿವಿಯೊ ಅಲ್ಲಿ ಅಗ್ನಿಯಿದೆ. ಸ್ವಾಹ ಎಂದರೆ ಆತ್ಮಾಹುತಿಯನ್ನು ಕೊಡುವುದು, ಆತ್ಮತ್ಯಾಗದ ಶಕ್ತಿ. ಸ್ವಧ ಎಂದರೆ ಸ್ವದ ಧಾರಣೆ; ಆತ್ಮಧಾರಣೆಯ ಶಕ್ತಿ; ಸ್ವಕಾಯ- ವೃತ್ತಿ. ಇದನ್ನು ಇತ್ತೀಚಿಗೆ ನಾವು "ಸ್ವಾವಲಂಬನೆ" ಎನ್ನುತ್ತೇವೆ. ಸ್ವಧ ಎಂದರೆ ಶರೀರದ ಆಧಾರವಾಗಿ ಶರೀರವೇ ಇರಲಿ ಎಂದು. ಶರೀರದ ಪೋಷಣೆ ಶರೀರದ ಶ್ರಮದಿಂದಲೇ ಆಗಲಿ.

ವೇದಗಳಿಂದ ಹೊರಟ ಮೊದಲ ಧ್ವನಿಂಯೇ ಅಗ್ನಿಂಯು ಉಪಾಸನೆಯದಾಗಿದೆ- ಅಗ್ನಿಮಿಳೆ ಪುರೋಹಿತಮ್ (೧.೧.೧.) "ಎದುರಿಗಿರುವ

ಅಗ್ನಿಯ ಉಪಾಸನೆ ಮಾಡುತ್ತೇನೆ." ಈ ಮಂತ್ರದಿಂದಲೆ ಋಗ್ವೇದ ಪ್ರಾರಂಭವಾಗುತ್ತದೆ. ಮನುಷ್ಯ ಅಗ್ನಿಯ ಉಪಯೋಗವನ್ನು ಒಳ್ಳೆಯ ಕೆಲಸಕ್ಕಾಗಿ ಮಾಡಲಾರಂಭಿಸಿದ. ಇದರ ಪ್ರಾರಂಭವೇ ಈ ಮಂತ್ರ. ಋಗ್ವೇದದಲ್ಲಿರುವ ಸರಿಸುಮಾರು ೨೦೦ ಸೂಕ್ತ ಅಗ್ನಿಗೆ ಸಂಬಂಧಿಸಿದ್ದಿವೆ. ಜೀವನದ ಎಲ್ಲ ಗಂಭೀರ ಕಾರ್ಯಗಳನ್ನು ಅಗ್ನಿಯ ಸಾಕ್ಷಿಯಲ್ಲಿ ಮಾಡುವುದು ವೈದಿಕರ ರೀತಿಯಾಗಿದೆ. ಅಗ್ನಿ ಸಾಕ್ಷಾತ್ ನಾರಾಯಣ. ಅವನದು ಎಷ್ಟೊಂದು ದೇದಿಪ್ಯಮಾನ ಮೂರ್ತಿ! ಎರಡು ಕಟ್ಟಿಗೆಗಳನ್ನು ಉಜ್ಜುತ್ತಲೇ ಅವನು ಪ್ರಕಟವಾಗುತ್ತಾನೆ! ಅವನು ಮೊದಲು ಎಲ್ಲಿ ಅಡಗಿದ್ದ ಎಂಬುದು ಯಾರಿಗೆ ಗೊತ್ತು! ಎಷ್ಟೊಂದು ಬಿಸಿ, ಎಷ್ಟೊಂದು ತೇಜಸ್ವಿ! ವೇದಗಳ ಮೊದಲ ಧ್ವನಿ ಅಗ್ನಿಯ ಉಪಾಸನೆಯನ್ನೆತ್ತಿಕೊಂಡೇ ಹೊರಟಿದೆ. ಅಗ್ನಿಯ ಆ ಜ್ವಾಲೆಗಳನ್ನು ನೋಡುವುದರಿಂದ ಜೀವಾತ್ಮನ ವ್ಯಪ್ರತೆ ನೆನಪಿಗೆ ಬರುತ್ತದೆ. ಅದರ ಆ ಜ್ವಾಲೆಗಳು ಹಬ್ಬಿರಲಿ ಅಥವಾ ಮನೆಯ ಒಲೆಯಲ್ಲೆ ಇರಲಿ ಅಥವಾ ಕಾಡಿನ ದಾವಾಗ್ನಿಯೆ ಆಗಿರಲಿ ವಿರಕ್ತನಿಗೆ ಮನೆ ಮಠವಿರುವುದಿಲ್ಲ. ಈ ಜ್ವಾಲೆಗಳೆಲ್ಲಿರುತ್ತವೊ ಅಲ್ಲಿ ಅಗ್ನಿಯ ಓಡಾಟ ಶುರುವಾಗುತ್ತದೆ. ಅದು ಒಂದೇ ಸಮನೆ ಚಡಪಡಿಸುತ್ತದೆ.ಆ ಜ್ವಾಲೆಗಳು ಮೇಲೆ ಹೋಗಲು ಆತುರವುಳ್ಳದ್ದಾಗಿವೆ. ಮೇಲಿರುವಂಥ ಪರಮಾತ್ಮ ತೇಜಸ್– ಸಮುದ್ರ, ಅವನು ಸೂರ್ಯ ನಾರಾಯಣ. ಅವನನ್ನು ಭೇಟಿ ಮಾಡಲು ನಿರಂತರ ಮೇಲಕ್ಕೆ ನೆಗೆಯುತ್ತಿವೆ. ಹುಟ್ಟಿನಿಂದ ಸಾಯುವವರೆಗೆ ಓಡಾಟ ನಡೆದಿದೆ. ಸೂರ್ಯ ಅಂಶಿ, ಈ ಜ್ವಾಲೆಗಳು ಅಂಶ. ಅಂಶವು ಅಂಶಿಯ ಕಡೆಗೆ ಹೋಗಲು ಚಡಪಡಿಸುತ್ತವೆ. " ಸೂರ್ಯನಿಂದ ನಾನು ಬಹಳ ದೂರದಲ್ಲಿದ್ದೇನೆ" ಎಂಬ ವಿಚಾರ ಕೂಡ ಜ್ವಾಲೆಗಳ ಮನಸ್ಸಿಗೆ ಬರುವುದಿಲ್ಲ. ತಮ್ಮ ಶಕ್ತಿ ಇದ್ದಷ್ಟು ಪೃಥ್ವಿಯಿಂದ ಮೇಲಕ್ಕೆ ನೆಗೆಯುತ್ತ ಹೋಗಬೇಕೆಂಬುದಷ್ಟೆ ಅವಕ್ಕೆ ಗೊತ್ತಿದೆ. ಜ್ವಾಲೆಯ ರೂಪದಲ್ಲಿ ಜ್ವಾಜಲ್ಯಮಾನವಾದ ವೈರಾಗ್ಯವೇ ಪ್ರಕಟವಾಗಿದೆ ಎಂಬುದು ಅಗ್ನಿಗೇನು ಗೊತ್ತು? ಆದ್ದರಿಂದ ವೇದದ ಮೊದಲ ಧ್ವನಿಯಾಯಿತು ಅಗ್ನಿಮಿಳೆ. (ಮುಂದುವರಿಯುವುದು....)

– ಅನು : ಸು.ಕೌ

* * *

ಒಯ್ಯುವುದಾಗಿಯೂ, ೨೦೨೦ಕ್ಕೆ ಮೊದಲು ಅದನ್ನು ನನಸಾಗಿಸಲು ನಾವು ಶ್ರಮಿಸುವುದಾಗಿಯೂ ಆಕೆಗೆ ಭರವಸೆ ನೀಡಿದೆ. ಈ ಪ್ರಶ್ನೆ, ಅಭಿವೃದ್ಧಿ ಹೊಂದಿದ ಭಾರತದಲ್ಲಿ ಜೀವಿಸುವ ಅಪೇಕ್ಷೆ ಹೊಸ ಯುವಜನರ ಮನಸ್ಸುಗಳನ್ನು ಪ್ರವೇಶಿಸಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ದೇಶದ ೫೪ ಕೋಟಿ ಯುವಜನರ ಕನಸನ್ನು ಪ್ರತಿನಿಧಿಸುವ ನಾನು ಇದುವರೆಗೆ ಭೇಟಿಯಾಗಿರುವ ೧೫ ಲಕ್ಷಕ್ಕೂ ಹೆಚ್ಚು ಯುವಜನರಲ್ಲಿ ಇದೇ ಭಾವನೆಗಳು ಪ್ರತಿಧ್ವನಿಸಿವೆ. ಒಂದು ಅಭ್ಯುದಯದ, ಸುರಕ್ಷಿತ ಮತ್ತು ಹೆಮ್ಮೆಯ ಭಾರತದಲ್ಲಿ ಜೀವಿಸಬೇಕೆಂಬ ಯುವಜನರ ಆಶೋತ್ತರಗಳು ನಾವು ಕೊಡುಗೆ ಸಲ್ಲಿಸುತ್ತಿರುವ ಯಾವುದೇ ವೃತ್ತಿಯಲ್ಲಿ ಮಾರ್ಗದರ್ಶಕ ಅಂಶವಾಗಬೇಕು.

ನಾನೀಗ ಹಳ್ಳಿಗಳಿಗೆ ಅಧಿಕಾರ ಒದಗಿಸುವ ವಿಷಯ ಪ್ರಸ್ತಾಪಿಸುತ್ತೇನೆ.

ಗೆಳೆಯರೇ, ನಾನು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡ ನಂತರದಲ್ಲಿ ೨೦೦೨ರ ಅಕ್ಟೋಬರ್ ೨೬ರಂದು ನಾಗಾಲ್ಯಾಂಡ್‌ಗೆ ನೀಡಿದ್ದ ಭೇಟಿಯನ್ನು ನೆನಪಿಗೆ ತಂದುಕೊಳ್ಳುತ್ತೇನೆ. ಖುಜ್ಞಾಮ ಹಳ್ಳಿಯ ಬುಡಕಟ್ಟು ಜನರ ಮಂಡಳಿಯ ಸದಸ್ಯರನ್ನು ಭೇಟಿಯಾಗಿ ಅವರೊಂದಿಗೆ ಹಳ್ಳಿಯ ಪ್ರಗತಿ ಮತ್ತು ಹಳ್ಳಿಯ ಪ್ರಜೆಗಳ ಕನಸಿನ ಬಗ್ಗೆ ಚರ್ಚಿಸಿದ್ದು ನನಗೆ ಒಂದು ವಿಶಿಷ್ಟ ಅನುಭವವಾಗಿತ್ತು. ಅಧಿಕಾರಸ್ಥ ಗ್ರಾಮ ಮಂಡಳಿ ಹಣಕಾಸಿನ ಅಧಿಕಾರಗಳನ್ನು ಹೊಂದಿದ್ದು, ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದುದನ್ನು ಕಂಡು ನನಗೆ ಬಹಳ ಸಂತೋಷವಾಯಿತು. ಹಣ್ಣು, ತರಕಾರಿಗಳನ್ನು ಬೆಳೆಯುತ್ತಿದ್ದ, ಏಳಿಗೆಯ ಸ್ಥಿತಿಯಲ್ಲಿದ್ದ ಹಳ್ಳಿಯೊಂದನ್ನ ನಾನು ಕಂಡಿದ್ದೆ. ಆದರೆ ಹಳ್ಳಿಗಳಿಂದ ಉತ್ಪನ್ನಗಳು ಮಾರುಕಟ್ಟೆಗೆ ಕ್ಷಿಪ್ರವಾಗಿ ಸಾಗುವುದನ್ನು ಸಾಧ್ಯಗೊಳಿಸಲು ಉತ್ತಮ ರಸ್ತೆಗಳ ಮೂಲಕ ನಾಗಾಲ್ಯಾಂಡ್‌ನಲ್ಲಿ ಸಂಪರ್ಕ ವ್ಯವಸ್ಥೆ ಒದಗಿಸಬೇಕಾದ ಅಗತ್ಯವಿದೆ. ತಮ್ಮ ಅಭಿವೃದ್ಧಿಯ ಬಗ್ಗೆ ನಿರ್ಧರಿಸುವ ಅಧಿಕಾರವನ್ನು ಎಲ್ಲ ಹಳ್ಳಿಗಳು ಹೊಂದಿದರೆ ಹಾಗೂ ತಮ್ಮ ತಮ್ಮ ನಡುವೆ ಹಾಗೂ ನಗರಗಳೊಂದಿಗೆ ಉತ್ತಮ ಸಂಪರ್ಕ ಹೊಂದಿದರೆ ಭಾರತದ ೬ ಲಕ್ಷ ಹಳ್ಳಿಗಳಲ್ಲಿ ಆಗಬಹುದಾದ ಪರಿವರ್ತನೆಯ ಬಗ್ಗೆ ಆ ಭೇಟಿ ನನಗೆ ಪ್ರಬಲವಾದ ಸಂದೇಶವೊಂದನ್ನು ನೀಡಿತು.

ನಾನೀಗ ಸ್ಪರ್ಧಾತ್ಮಕತೆಗಾಗಿ ಗ್ರಾಮೀಣ ಅಂತಃಸ್ಸತ್ವವನ್ನು ಕ್ರೋಢೀಕರಿಸುವ ವಿಚಾರಕ್ಕೆ ಬರುತ್ತೇನೆ.

ಮೂರು ಲಕ್ಷ ಜನಸಂಖ್ಯೆಯುಳ್ಳ ೬೫ ಹಳ್ಳಿಗಳಿಗೆ ನಗರಗಳ ಸೌಲಭ್ಯಗಳನ್ನು ಒದಗಿಸಲು ತಂಜಾವೂರಿನ ಮಹಿಳೆಯರ ಪೆರಿಯಾರ್ ಮಣಿಯವನ್ಮಾಯಿ ತಂತ್ರಜ್ಞಾನ ಕಾಲೇಜ್ ಪುರಸಂಕೀರ್ಣವನ್ನು ಸ್ಥಾಪಿಸಿರುವ ಬಗ್ಗೆ ನಾನೀಗ ಹೇಳಲಿಚ್ಛಿಸುತ್ತೇನೆ.

ಇದರಲ್ಲಿ ಮೂರು ಸಂಪರ್ಕಗಳು-ಭೌತಿಕ, ವಿದ್ಯುನ್ಮಾನ ಮತ್ತು ಜ್ಞಾನ- ಸೇರಿದ್ದು ಇವುಗಳಿಂದಾಗಿ ಆರ್ಥಿಕ ಸಂಪರ್ಕಕ್ಕೆ ದಾರಿಯಾಗಿದೆ. ಪೆರಿಯಾರ್‌ಪುರದಲ್ಲಿ ಆರೋಗ್ಯ ರಕ್ಷಣಾ ಕೇಂದ್ರಗಳು, ಪ್ರಾಥಮಿಕ ಮಟ್ಟದಿಂದ ಸ್ನಾತಕೋತ್ತರ ಮಟ್ಟದವರೆಗಿನ ಶಿಕ್ಷಣ ಮತ್ತು ವೃತ್ತಿ ತರಬೇತಿ ಕೇಂದ್ರಗಳು ಇವೆ. ಇದರಿಂದ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳ ಸೃಷ್ಟಿಯಾಗಿದೆ ಹಾಗೂ ೧೦೦೦ ಸ್ವ-ಸಹಾಯ ಗುಂಪುಗಳ ಸಕ್ರಿಯ ಬೆಂಬಲದಿಂದ ಅನೇಕ ಉದ್ಯಮಿಗಳು ರೂಪುಗೊಂಡಿದ್ದಾರೆ. ೨೦೦ ಎಕರೆಯಷ್ಟು ಪಾಳುಭೂಮಿಯನ್ನು ವ್ಯವಸಾಯಯೋಗ್ಯ ಭೂಮಿಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ.

ಗ್ರಾಮಸ್ಥರು ಬೇಸಾಯದಲ್ಲಿ, ಜತ್ರೋಪ, ಔಷಧಿಯ ಸಸ್ಯಗಳು, ಗಿಡಮೂಲಿಕೆಗಳನ್ನು ಬೆಳೆಸುವುದರಲ್ಲಿ, ಜೈವಿಕ ತ್ಯಾಜ್ಯ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದರಲ್ಲಿ, ಆಹಾರ ಸಂಸ್ಕರಣದಲ್ಲಿ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಮಾರುಕಟ್ಟೆ ಕೇಂದ್ರಗಳನ್ನು ನಡೆಸುವುದರಲ್ಲಿ ಮಗ್ನರಾಗಿದ್ದಾರೆ. ಪೆರಿಯಾರ್‌ಪುರ ಇಡೀ ಪ್ರದೇಶಕ್ಕೆ ಒಂದು ತಾಳಿಕೆಯ ಆರ್ಥಿಕಾಭಿವೃದ್ಧಿ ಮಾದರಿಯನ್ನು ಒದಗಿಸುತ್ತದೆ.

ಕಳೆದ ೮ ತಿಂಗಳಿಂದ ಮಹಿಳೆಯರ ಪೆರಿಯಾರ್ ಮಾಣಿಯಮ್ಮಾ ಇಂಜಿನಿಯರಿಂಗ್ ಕಾಲೇಜಿನ ತಂತ್ರಜ್ಞಾನದ ಬೆಂಬಲದೊಡನೆ ಪೆರಿಯಾರ್ ಗ್ರಾಮಗಳ ಜನರು ಅನೇಕ ಉತ್ಪನ್ನಗಳ ಬಗ್ಗೆ ಜಪಾನಿನ ವಿದೇಶ ವ್ಯಾಪಾರ ಸಂಸ್ಥೆ- ಜೆಟ್ರೊನ ತಜ್ಞರೊಂದಿಗೆ ಕೆಲಸ ಮಾಡಿದ್ದಾರೆ ಹಾಗೂ ಇದಕ್ಕೆ ಅಗತ್ಯವಾದ ಮೂಲಭೂತ ಸಾಮರ್ಥ್ಯ ಮತ್ತು ಕಚ್ಚಾ ಸಾಮಾಗ್ರಿಗಳು ತಂಜಾವೂರು ಜಿಲ್ಲೆಯಲ್ಲಿ ಲಭ್ಯ. ಜೆಟ್ರೊ ತಜ್ಞರ ಬೆಂಬಲ ಹಾಗೂ ದೆಹಲಿ ಮತ್ತು ಟೋಕಿಯೋದ ಪ್ರದರ್ಶನಗಳಲ್ಲಿ ದೊರೆತ ಅನುಭವದೊಂದಿಗೆ ಗ್ರಾಮಸ್ಥರು ಜೀವನ ಶೈಲಿಯ ೫೫ ಉದ್ಯಮಗಳಿಗೆ ಸಂಬಂಧಿಸಿದಂತೆ ಅಂತರಾಷ್ಟೀಯವಾಗಿ ಸ್ಪರ್ಧಾತ್ಮಕವಾದ ಮಾದರಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಸಹಕಾರಿ ಉದ್ಯಮದಿಂದಾಗಿ ಎಲ್ಲ ೬೫ ಹಳ್ಳಿಗಳ ಜನರ ಸೃಜನಾತ್ಮಕ ಸಾಮರ್ಥ್ಯ ಹೆಚ್ಚಾಗಿದ್ದು, ಅವರು ಅಂತಾರಾಷ್ಟ್ರೀಯವಾಗಿ ಸ್ವೀಕಾರಾರ್ಹವಾದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿ ತಯಾರಿಸುವುಕ್ಕೆ ಸಾಧ್ಯವಾಗಿದೆ. ಅನೇಕ ರಾಜ್ಯಗಳಲ್ಲಿ ಇಂತಹುದೇ ಪುರ ಸಂಕೀರ್ಣಗಳ ಸ್ಥಾಪನೆಯಾಗುತ್ತಿರುವುದನ್ನು ನಾನು ಕಂಡಿದ್ದೇನೆ. ಗ್ರಾಮಗಳು ಮತ್ತು ನಗರಗಳ ಅಂತರವನ್ನು ನಿವಾರಿಸಲು ಇಡೀ ದೇಶದಲ್ಲಿ ೭೦೦೦ ಪುರ ಸಂಕೀರ್ಣಗಳ ಅಗತ್ಯವಿದೆ.

ಈಗ ನಾನು ಬೀಜದಿಂದ ಆಹಾರದವರೆಗೆ, ಕೃಷಿ ಬೆಳೆವಣಿಗೆಯ ಬೆನ್ನೆಲುಬನ್ನು ಬಲಪಡಿಸುವ ಬಗ್ಗೆ ಮಾತನಾಡಲಿಚ್ಛಿಸುತ್ತೇನೆ.

ಬೇರೆ ಬೇರೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ರಾಷ್ಟ್ರಪತಿ ಭವನಕ್ಕೆ ಭೇಟಿ ನೀಡಿದ್ದ ೬೦೦೦ ಕ್ಕೂ ಹೆಚ್ಚು ರೈತರನ್ನು ಭೇಟಿಯಾಗಿದ್ದಾಗ ನನಗೆ ದೊರೆತ ಪುಷ್ಟಿಕರ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಈ ರೈತರು ರಾಷ್ಟ್ರಪತಿ ಭವನದ ಮೊಗಲ್ ಉದ್ಯಾನವನ, ಗಿಡಮೂಲಿಕೆಗಳ ಉದ್ಯಾನವನ, ಅಧ್ಯಾತ್ಮಾ ಉದ್ಯಾನವನ, ಸಂಗೀತ ಉದ್ಯಾನವನ, ಜೈವಿಕ-ಡೀಸಲ್ ಉದ್ಯಾನವನ ಹಾಗೂ ಪೌಷ್ಟಿಕಾಂಶ ಉದ್ಯಾನವನಗಳ ಬಗ್ಗೆ ತೀವ್ರ ಆಸಕ್ತಿಯನ್ನು ವ್ಯಕ್ತಪಡಿಸಿದರು ಹಾಗೂ ತೋಟಗಾರಿಕೆ ತಜ್ಞರೊಂದಿಗೆ ವಿಚಾರವಿನಿಮಯ ನಡೆಸಿದರು. ಇತ್ತೀಚೆಗೆ, "ಕೃಷಿ ಕಾಯಲಾಗದು" ಎಂಬ ವಿಷಯದ ಬಗ್ಗೆ ನಡೆದ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ನಾನು ಭಾಷಣ ಮಾಡಿದಾಗ, ರೈತರು ನೀಡಿದ ಅನೇಕ ಕಾರ್ಯಸಾಧ್ಯ ಸಲಹೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿದೆ. ಕಡಿಮೆ ಭೂಮಿ, ಕಡಿಮೆ ಜಲ ಸಂಪನ್ಮೂಲಗಳು ಮತ್ತು ಕಡಿಮೆ ಮಾನವ ಶಕ್ತಿಯಿಂದ ನಾವು ಕೃಷಿ ಉತ್ಪಾದನೆಯನ್ನು ದುಪ್ಪಟ್ಟುಗೊಳಿಸಬೇಕು ಹಾಗು ಕೃಷಿಯು ದೇಶದ ಬೆನ್ನೆಲಬಾಗಿರುವುದರಿಂದ "ಬೀಜದಿಂದ ಆಹಾರದವರೆಗೆ" ತತ್ವದ ಮೂಲಕ ದೇಶದ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಬೇಕು. ೨ನೇ ಹಸಿರು ಕ್ರಾಂತಿಗಾಗಿ ಫಲವತ್ತಾದ ಜಮೀನನ್ನು ರಕ್ಷಿಸಿ, ಪೋಷಿಸಲು ಅಗತ್ಯವಾದ ಅಧಿಕಾರವನ್ನು ನಾವು ರೈತರಿಗೆ ನೀಡಬೇಕು,

ರೈತರು ಮತ್ತು ಕೃಷಿ ವಿಜ್ಞಾನಿಗಳು ಕೈಗಾರಿಕೆಗಳ ಸಹಭಾಗಿತ್ವದ ಮೂಲಕ ಅದರಲ್ಲೂ ಮೌಲ್ಯ ವರ್ಧನೆಗಾಗಿ ಇಂತಹ ಸಹಭಾಗಿತ್ವ ಹೊಂದುವ ಮೂಲಕ ಕೃಷಿಯ ಒಟ್ಟು ದೇಶೀಯ ಉತ್ಪನ್ನವನ್ನು ಕನಿಷ್ಠ ವಾರ್ಷಿಕ ಶೇಕಡ ೪ಕ್ಕೆ ಹೆಚ್ಚಿಸಲು ದೇಶ ಸನ್ನದ್ಧವಾಗಿದೆ ಎಂಬ ವಿಶ್ವಾಸವನ್ನು ಅವರು ಹೊಂದಿದ್ದಾರೆ ಎಂದು ರೈತರೊಂದಿಗೆ ನಾನು ನಡೆಸಿದ ಮಾತುಕತೆಗಳು ನನಗೆ ನೀಡಿವೆ.

ನಾನು ಮಾತನಾಡಲಿಚ್ಛಿಸುವ ಮುಂದಿನ ವಿಷಯವೆಂದರೆ ಸಮಸ್ಯೆಗಳನ್ನು ಸೋಲಿಸಿ, ಯಶಸ್ಸು ಗಳಿಸುವುದೇ ಆಗಿದೆ.

ಈ ವರ್ಷದ ಫೆಬ್ರವರಿ ೨೪ರ ಸಂಜೆ ಕೊಯಮತ್ತೂರಿನಲ್ಲಿ ನನಗೊಂದು ಸುಂದರ ಅನುಭವವಾಯಿತು. ಇಪ್ಪತ್ತು ಜನರೊಂದಿಗೆ ನನ್ನ ಭೇಟಿಯ ಕಾರ್ಯಕ್ರಮವಿದ್ದು ಆ ಪೈಕಿ ಮೊದಲ ವ್ಯಕ್ತಿಯನ್ನು ಭೇಟಿಯಾಗಲು ನಾನು ಸಿದ್ಧವಾಗುತ್ತಿದ್ದಂತೆ, ಬಹುಶಃ ಅರವತ್ತರ ಸಮೀಪದ ವಯಸ್ಸಿನ ಮುಗುಳ್ನಗುತ್ತಿದ್ದ ವ್ಯಕ್ತಿಯೊಬ್ಬರು ಗಾಲಿ ಕುರ್ಚಿಯಲ್ಲಿ ಕಾಣಿಸಿಕೊಂಡರು: ದುರ್ದೈವದಿಂದ ಅವರಿಗೆ ಕೈ ಕಾಲುಗಳು ಇರಲಿಲ್ಲ. ಕಾಂತಿ ತುಂಬಿದ ಅವರ ಮುಖ ಅವರ ಮನಸ್ಸಿನ ಸಂತಸವನ್ನು ಸೂಚಿಸುತ್ತಿತ್ತು. ತಾವು ವಿದ್ವಾನ್ ಕೊಯಮತ್ತೂರು ಎಸ್. ಆರ್. ಕೃಷ್ಣಮೂರ್ತಿ ಎಂದು ಅವರು ತಮ್ಮ ಪರಿಚಯ ಹೇಳಿಕೊಂಡರು. ನಾನು ಅವರನ್ನು ವಂದಿಸಿ, ಇದು ನಿಮಗೆ ಹೇಗಾಯಿತು ಎಂದು ಕೇಳಿದೆ. ಅವರು ಮುಗುಳ್ನಗುತ್ತಲೇ ಹುಟ್ಟಿದಾಗಿನಿಂದ ಹೀಗೆಯೇ ಇದ್ದೇನೆ ಎಂದು ಹೇಳಿದರು. ತಮಗೆ ವಿಶ್ವಾಸ, ತರಬೇತಿ ಮತ್ತು ನೆರವು ನೀಡಿದ್ದಕ್ಕಾಗಿ ಅವರು ದೇವರು,, ತಮ್ಮ ತಂದೆ-ತಾಯಿಯವರು, ಉಪಾಧ್ಯಾಯರು ಮತ್ತಿತರ ಅನೇಕರಿಗೆ ಕೃತಜ್ಞತೆ ಸೂಚಿಸಿದರು. ನಿಮಗೆ ನಾನೇನು ಮಾಡಬಲ್ಲೆ ಎಂದು ನಾನು ಅವರನ್ನು ಕೇಳಿದೆ. “ರಾಷ್ಟ್ರಪತಿಯವರೇ, ನಿಮ್ಮಿಂದ ನನಗೇನೂ ಬೇಡ. ನಿಮ್ಮ ಮುಂದೆ ನಾನು ಹಾಡಲು ಬಯಸುತ್ತೇನೆ” ಎಂದು ಅವರು ಹೇಳಿದರು. ನಾನು ತಕ್ಷಣವೇ ಅದಕ್ಕೆ ಒಪ್ಪಿಕೊಂಡೆ. ಅವರು ಶ್ರೀರಾಗದಲ್ಲಿ ತ್ಯಾಗರಾಜರ ಪಂಚರತ್ನ ಕೃತಿ ಎಂದರೋ ಮಹಾನುಭಾವಲು ಕೃತಿಯನ್ನು ಸುಶ್ರಾವ್ಯವಾಗಿ ಹಾಡಿ ತಮ್ಮ ಪ್ರತಿಭೆಯ ಒಂದು ಕಿರುನೋಟವನ್ನು ನನಗೆ ನೀಡಿದರು. ಇದರಿಂದ ನನ್ನ ಮನಸ್ಸು ತುಂಬಿ ಬಂದಿತು. ಇದರ ಸಂದೇಶವಾದರೂ ಏನು? ದೈಹಿಕ ಸವಾಲುಗಳನ್ನೆದುರಿಸುತ್ತಿದ್ದರೂ, ಈ ವ್ಯಕ್ತಿಯ ಸಕಾರಾತ್ಮಕ ಭಾವನೆ ಮತ್ತು ದೃಢ ನಿಷ್ಠೆಯಿಂದಾಗಿ ಹಾಗೂ ತಂದೆ ತಾಯಿಯವರು, ಉಪಾಧ್ಯಾಯರು, ವಿದ್ವಾಂಸರು ಮತ್ತು ರಸಿಕರ ಪ್ರೋತ್ಸಾಹದಿಂದಾಗಿ ಅವರಲ್ಲಿದ್ದ ಸಂಗೀತದ ಸುಪ್ತ ಪ್ರತಿಭೆ ಅರಳುವುದಕ್ಕೆ ಸಾಧ್ಯವಾಯಿತು. ಈಗ ಅವರು ತಮ್ಮ ಕಲೆಯನ್ನು ನಿರಂತರವಾಗಿ ಉಣಬಡಿಸಿ, ಇತರರಿಗೆ ಸ್ಫೂರ್ತಿಯಾಗಲು ಇಚ್ಛಿಸುತ್ತಾರೆ. ತಮ್ಮ ಸಂಗೀತದ ಪ್ರತಿಭೆಯಿಂದಾಗಿ ಅವರು ಈ ತಿಂಗಳು ರಾಷ್ಟ್ರಪತಿ ಭವನದ ಕಲಾ ಮಂದಿರದಲ್ಲಿ ಕಚೇರಿ ಮಾಡಿದ್ದಾರೆ.

ಸಹಭಾಗಿತ್ವದ ಮೂಲಕ ಸಮಸ್ಯೆಗಳ ನಿವಾರಣೆ ಮತ್ತೊಂದು ಪ್ರಮುಖ ವಿಷಯ.

೨೦೦೫ರಲ್ಲಿ ಸಂಭವಿಸಿದ ವಿನಾಶಕಾರಿ ಭೂಕಂಪದಿಂದ ಆಗತಾನೇ ಚೇತರಿಸಿಕೊಳ್ಳುತ್ತಿದ್ದ ಜಮ್ಮು ಮತ್ತು ಕಾಶ್ಮೀರದ ಜನತೆಯ ಮತ್ತು ಮಕ್ಕಳ ಅದಮ್ಯ

ಚೈತನ್ಯದ ಅನುಭವ ಪಡೆಯುವ ಅವಕಾಶ ನನಗೊದಗಿತು. ವಾಯುಬಲದ ಅಧಿಪತ್ಯ ನಿವಾಸಿಗಳಿಗೆ ಪರಿಹಾರ ಮತ್ತು ವೈದ್ಯಕೀಯ ನೆರವು ನೀಡಲು ದತ್ತು ತೆಗೆದುಕೊಂಡಿದ್ದ ಆ ರಾಜ್ಯದ ಒಂದು ಪ್ರದೇಶದ ಉರುಸ ಹಳ್ಳಿಗೆ ನಾನು ೨೦೦೫ರ ನವೆಂಬರ್ ೨೬ ರಂದು ಭೇಟಿ ನೀಡಿದ್ದೆ. ನಾನಲ್ಲಿಗೆ ಹೋದಾಗ ಅಲ್ಲಿಯ ಶಾಲಾ ಕಟ್ಟಡ ತೀವ್ರವಾಗಿ ಹಾನಿಗೊಂಡದ್ದನ್ನು ನಾನು ಕಂಡೆ. ನಾನು ಉರುಸ ಹಳ್ಳಿಯ ಶಾಲೆಯ ಎಲ್ಲ ಮಕ್ಕಳನ್ನು ಹಾಗೂ ಗ್ರಾಮದ ಪ್ರಜೆಗಳನ್ನು ಭೇಟಿಯಾದೆ. ಗ್ರಾಮಸ್ಥರು ತಮಗಾದ ನಷ್ಟಗಳ ಬಗ್ಗೆ ನನಗೆ ವಿವರ ನೀಡಿದರು ಹಾಗೂ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳಲ್ಲಿ ರಾಜ್ಯ ಸರ್ಕಾರದೊಡನೆ ಭೂಸೈನ್ಯ ಮತ್ತು ವಾಯುಬಲ ವಹಿಸಿದ ಪಾತ್ರವನ್ನು ಮುಕ್ತಕಂಠದಿಂದ ಹೊಗಳಿದರು. ತಮ್ಮ ಸಮಸ್ಯೆಗಳನ್ನು ಸೋಲಿಸುವಲ್ಲಿ ಉರುಸದ ಜನತೆ ತೋರಿದ ಸಾಹಸವನ್ನು ನಾನು ಮೆಚ್ಚಿದ್ದೇನೆ. ಸಮಸ್ಯೆಗಳು ತಮ್ಮ ಮೇಲೆ ಯಜಮಾನಿಕೆ ನಡೆಸುವುದಕ್ಕೆ ಅವಕಾಶ ಕೊಡುವುದರ ಬದಲಿಗೆ ಅವರು ಸಮಸ್ಯೆಗಳನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡ ಧಣಿಗಳಾಗಿದ್ದಾರೆ. ಭೂಕಂಪದಿಂದ ತೀವ್ರ ಹಾನಿಯಾಗಿದ್ದರೂ, ಗ್ರಾಮದ ಜನತೆ ಪರಿಹಾರ ಕಾರ್ಯಾಚರಣೆಯಲ್ಲಿ ಸಶಕ್ತ ಪಡೆಗಳೊಂದಿಗೆ ಸಾಹಸದಿಂದ ಭಾಗವಹಿಸಿದ್ದರು. ಹಾಗೂ ಅವರನ್ನು ಭೇಟಿಯಾಗಲು ನಾನು ಹೋದಾಗ ಅವರು ಮುಗುಳ್ನಗುತ್ತಿದ್ದರು. ಅವರು ನನ್ನೊಂದಿಗೆ ಮಾತನಾಡಿ ತಾತ್ಕಾಲಿಕ ಟೆಂಟ್‌ಗಳಲ್ಲಿ ಶಾಲೆ ನಡೆಯುತ್ತಿದೆ ಎಂದು ತಿಳಿಸಿದರು. ಭೂಕಂಪದಲ್ಲಿ ಹಾನಿಗೊಂಡ ಮನೆಗಳಲ್ಲಿ ವಾಸಿಸುತ್ತಿದ್ದ ದುರ್ದೈವಿಗಳಿಗೆ ಕೊಡಬೇಕಾಗಿದ್ದ ಪರಿಹಾರವನ್ನು ಸ್ಥಳದಲ್ಲೆ ನಿರ್ಧರಿಸಿ ಕೊಡಲು ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ಜಮ್ಮು ಮತ್ತು ಕಾಶ್ಮೀರದ ಹಂಗಾಮಿ ಮುಖ್ಯ ನ್ಯಾಯಾಧೀಶರೂ ಸ್ಥಳದಲ್ಲಿದ್ದುದನ್ನು ನಾನು ಕಂಡೆ. ಕಠಿಣ ಸವಾಲುಗಳನ್ನೆದುರಿಸುವಾಗ ಇಂತಹ ಸಾಹಸದ ಅನೇಕ ಕೃತ್ಯಗಳನ್ನು ನಮ್ಮ ಪ್ರಜೆಗಳು ಮಾಡಿರುವುದು ನನ್ನ ಅನುಭವಕ್ಕೆ ಬಂದಿದೆ.

ವಿಪತ್ತುಗಳನ್ನು ಎದುರಿಸುವಲ್ಲಿನ ಸಾಹಸದ ವಿಷಯಕ್ಕೆ ನಾನೀಗ ಬರುತ್ತೇನೆ.

೨೦೦೫ರಲ್ಲಿ ನಾನು ಕಾರ್ ನಿಕೊಬಾರ್ ದ್ವೀಪಗಳಿಗೆ ಭೇಟಿ ನೀಡಿದ್ದಾಗ ಚುಕ್‌ಚುಚಾ ಹಳ್ಳಿಯ ಬುಡಕಟ್ಟು ಮಂಡಳಿಯ ಮುಖಂಡರು, ವಿದ್ಯಾರ್ಥಿಗಳು ಮತ್ತು ಮಕ್ಕಳನ್ನು ನಾನು ಭೇಟಿಯಾಗಿದ್ದೆ. ಅಲ್ಲಿ ಅನೇಕ ಮರುನಿರ್ಮಾಣ ಮತ್ತು ಪುನರ್ವಸತಿ ಚಟುವಟಿಕೆಗಳು ನಡೆಯುತ್ತಿದ್ದವು. ಬುಡಕಟ್ಟು ಮಂಡಳಿಯ ಸದಸ್ಯರೊಂದಿಗೆ ಚರ್ಚಿಸುತ್ತಿದ್ದಾಗ ಕಾರ್ ನಿಕೊಬಾರ್ ದ್ವೀಪವಾಸಿಗಳ ವಿಶಿಷ್ಟ ಗುಣವನ್ನು ನಾನು ಮನಗಂಡೆ. ೨೦೦೪ರ ಡಿಸೆಂಬರ್ ೨೬ರಂದು ಸಂಭವಿಸಿದ ಸುನಾಮಿಯಿಂದ ಅನೇಕರು ಪ್ರಾಣ ಕಳೆದುಕೊಂಡಿದ್ದರೂ, ಅದರಿಂದ ತೀವ್ರ ತೊಂದರೆಗೊಳಗಾದವರನ್ನು ದ್ವೀಪಗಳ ಬುಡಕಟ್ಟು ಜನರು ತಮ್ಮ ಮಕ್ಕಳಂತೆ ಪರಿಗಣಿಸಿ ಅವರಿಗೆ ಆಶ್ರಯ ನೀಡಿದ್ದರು. ಹಾಗೂ ಕಾರ್ ನಿಕೊಬಾರ್ ದ್ವೀಪಗಳಲ್ಲಿ ಅನಾಥಾಲಯ ಎಂಬುದು ಯಾವುದೂ ಇಲ್ಲ. ಅವರ ಎದೆಗಾರಿಕೆಯಿಂದ ನನ್ನ ಮನಸ್ಸು ತುಂಬಿ ಬಂದಾಗ ಸಮುದ್ರದ ಅಲೆಗಳು ಎಂಬ ಕವನವೊಂದನ್ನು ಅಲ್ಲೇ ನಾನು ರಚಿಸಿದೆ. ಅದು ಹೀಗಿದೆ:

ನಾವು ಸಮುದ್ರದಲೆಗಳ ಮಕ್ಕಳು
ಅವು ನಮ್ಮ ಒಡನಾಡಿಗಳು
ಅವಕ್ಕೆ ಬಂದಾಗ ಕೋಪತಾಪ
ನಮಗೊಡ್ಡುತ್ತವೆ ಅವು ಸವಾಲುಗಳ
ಸಮುದ್ರದಲೆಗಳನ್ನು ಮರೆತು ನಿಲ್ಲುವ
ಎದೆಗಾರಿಕೆ ಕೊಟ್ಟಿದ್ದಾನೆ ಭಗವಂತ
ಯಶಸ್ವಿಯಾಗುವೆವು ನಾವು
ಯಶಸ್ವಿಯಾಗುವೆವು ನಾವು
ಭಗವದನುಗ್ರಹದಿಂದ.

ಹಳ್ಳಿಯಲ್ಲಿ ಸೇರಿದ್ದ ಜನರೆಲ್ಲರೂ ನನ್ನೊಂದಿಗೆ ಈ ಕವನ ಹಾಡಿದರು ಹಾಗೂ ಸುನಾಮಿಯಿಂದಾಗಿ ತೀವ್ರ ಸಂಕಷ್ಟಕ್ಕೊಳಗಾಗಿದ್ದರೂ ಈ ಜನರು ಹೆಚ್ಚಿನ ಸಾಹಸ ಮತ್ತು ಉತ್ಸಾಹಗಳನ್ನು ಪ್ರದರ್ಶಿಸಿದರು.

ಗೆಳೆಯರೇ ಈಗ ನಾನು ಸಾಮಾಜಿಕ ಪರಿವರ್ತನೆಗೆ ಸಂಪರ್ಕ ಕುರಿತು ಹೇಳಲಿಚ್ಛಿಸುತ್ತೇನೆ.

೨೦೦೪ರ ಸೆಪ್ಟೆಂಬರ್ ೧೬ ರಂದು ನಾನು ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್‌ನಲ್ಲಿ ಅಖಿಲ ಆಫ್ರಿಕಾದ ಪಾರ್ಲಿಮೆಂಟ್ ಅನ್ನು ಉದ್ದೇಶಿಸಿ ಮಾತನಾಡಿದೆ. ಆ ಆಫ್ರಿಕಾ ಒಕ್ಕೂಟದ ೫೩ ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದ ಈ ಸಭೆಯಲ್ಲಿ ನಾನು ೧೦ ಕೋಟಿ ಡಾಲರ್ ಅಂದಾಜು ವೆಚ್ಚದಲ್ಲಿ ಆಫ್ರಿಕಾದ ೫೩ ದೇಶಗಳ ನಡುವೆ ಸಂಘಟಿತ ಉಪಗ್ರಹ, ಫೈಬರ್ ಆಪ್ಟಿಕ್ಸ್ ಮತ್ತು ನಿಸ್ತಂತು ಜಾಲದ ಮೂಲಕ ಸಂಪರ್ಕ ಕಲ್ಪಿಸುವ ಅಖಿಲ ಆಫ್ರಿಕಾ ಇ-ಜಾಲದ ಪರಿಕಲ್ಪನೆಯನ್ನು ಸಲಹೆ ಮಾಡಿದೆ.

ಈ ಯೋಜನೆಯ ಅಂಗವಾಗಿ ೧೨ ವಿಶ್ವ ವಿದ್ಯಾಲಯಗಳು (ಭಾರತದ ೭ಮತ್ತು ಆಫ್ರಿಕಾದ ೫). ೧೭ ಸುಪರ್ ಸ್ಪೆಶಾಲಿಟಿ ಆಸ್ಪತ್ರೆಗಳು (ಭಾರತದ ೧೨ ಮತ್ತು ಆಫ್ರಿಕಾದ ೫), ಆಫ್ರಿಕಾದ ೫೩ ದೂರ ವೈದ್ಯಕೀಯ ಕೇಂದ್ರಗಳು ಮತ್ತು ೫೩ ದೂರ ಶಿಕ್ಷಣ ಕೇಂದ್ರಗಳ ನಡುವೆ ಸಂಪರ್ಕ ಕಲ್ಪಿಸಲಾಗುವುದು. ಇಥಿಯೋಪಿಯಾದಲ್ಲಿ ದೂರಶಿಕ್ಷಣ ಮತ್ತು ದೂರ ವೈದ್ಯಕೀಯ ಕೇಂದ್ರಗಳ ನಡುವೆ ಸಂಪರ್ಕ ಕಲ್ಪಿಸುವ ಪ್ರಾಯೋಗಿಕ ಯೋಜನೆ ಈಗಾಗಲೇ ಕಾರ್ಯಾರಂಭ ಮಾಡಿದೆ. ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಇಥಿಯೋಪಿಯದ ಅಡ್ಡಿಸ್ ಅಬಾಬ ಮತ್ತು ಹರ್ಮಾಯ ವಿಶ್ವವಿದ್ಯಾಲಯಗಳ ೩೪ ವಿದ್ಯಾರ್ಥಿಗಳಿಗೆ ಎಂಬಿಎ ಶಿಕ್ಷಣದ ಕೋರ್ಸ್ ಅನ್ನು ಪ್ರಾರಂಭಿಸಿದೆ. ದೂರ ವೈದ್ಯಕೀಯ ಸೇವೆಗೆ ಸಂಬಂಧಿಸಿದಂತೆ ಹೈದ್ರಾಬಾದ್‌ನ ಕೇರ್ ಆಸ್ಪತ್ರೆಯ ತಜ್ಞರು ಹೃದ್ರೋಗ ಮತ್ತು ರೇಡಿಯಾಲಜಿ ಬಗ್ಗೆ ಅಡ್ಡಿಸ್ ಅಬಾಬದ ಬ್ಲಾಕ್ ಲಯನ್ ಆಸ್ಪತ್ರೆಯ ವೈದ್ಯರಿಗೆ ಒಂದು ಗಂಟೆಯ ದೂರ ಸಮಾಲೋಚನೆಯನ್ನು ಒದಗಿಸುತ್ತಿದ್ದಾರೆ. ಅಖಿಲ ಆಫ್ರಿಕಾ ಜಾಲವನ್ನು ಬಳಸಿಕೊಂಡು ಎಲ್ಲ ದೇಶಗಳ ಮುಖ್ಯಸ್ಥರು ಪರಸ್ಪರ ತಕ್ಷಣ ಸಂಪರ್ಕವನ್ನು ಪಡೆದುಕೊಳ್ಳಲಿದ್ದಾರೆ. ಆಫ್ರಿಕಾ ಖಂಡದಲ್ಲಿ ಸಾಮಾಜಿಕ ಪರಿವರ್ತನೆ ಉಂಟುಮಾಡಲು ತಂತ್ರಜ್ಞಾನದ ಅನುಕೂಲಗಳನ್ನು ಅಲ್ಲಿಯ ಜನರಿಗೆ ಒದಗಿಸುವ ಮೂಲಕ ಆ ದೇಶಗಳೊಂದಿಗೆ ಕೆಲಸ ಮಾಡುವುದನ್ನು

ಸಾಧ್ಯಗೊಳಿಸಿದ ಭಾರತದ ಅನುಭವದ ಬಗ್ಗೆ ನನಗೆ ಬಹಳ ಸಂತೋಷವಾಗುತ್ತದೆ. **ಗೆಳೆಯರೇ, ಈಗ ನಾನು ನಮ್ಮ ದೇಶವನ್ನು ರಕ್ಷಿಸಿಕೊಳ್ಳುವ ನಮ್ಮ ಹೆಮ್ಮೆಯ ಕರ್ತವ್ಯದ ಬಗ್ಗೆ ಮಾತನಾಡುತ್ತೇನೆ.**

೧೭ ಸಾವಿರ ಅಡಿ ಎತ್ತರದಲ್ಲಿ ಸಿಯಾಚಿನ್ ನೀರ್ಗಲ್ಲಿನಲ್ಲಿ ಭಾರತದ ಭೂಸೈನ್ಯದ ಸ್ವಾಧೀನದಲ್ಲಿರುವ ಕುಮಾರ್ ಎಂಬ ಸ್ಥಳಕ್ಕೆ ನಾನು ಭೇಟಿ ನೀಡಿದ್ದೆ, ಐಎನ್‌ಎಸ್ ಸಿಂಧುರಕ್ಷಕ್ ಜಲಾಂತರ್ಗಾಮಿ ನೌಕೆಯಲ್ಲಿ ನಾನು ನೀರಿನ ಒಳಗಡೆ ಸ್ಮರಣೀಯ ಪ್ರಯಾಣ ಕೈಗೊಂಡಿದ್ದೆ ಹಾಗೂ ಸುಖೋಯ್-೩೦ ಯುದ್ಧ ವಿಮಾನದಲ್ಲಿ ಹಾರಿ ೨.೫ರ ಮಟ್ಟದ ಗುರುತ್ವಾಕರ್ಷಣ ಶಕ್ತಿಯ ಅನುಭವ ಪಡೆದೆ. ಈ ಮೂರು ಅನುಭವಗಳಲ್ಲಿ, ನೈಸರ್ಗಿಕವಾದ ಮತ್ತು ಮಾನವ ನಿರ್ಮಿತ ಅತ್ಯಂತ ಪ್ರತಿಕೂಲ ಪರಿಸ್ಥಿತಿಗಳಲ್ಲೂ, ತಮ್ಮ ಕರ್ತವ್ಯ ಭಾರವನ್ನು ಮೀರಿದ ಕಾರ್ಯಭಾರಗಳನ್ನು ನಿರ್ವಹಿಸುತ್ತಿರುವ, ಸದಾ ಎಚ್ಚರದಿಂದಿರುವ ನಮ್ಮ ಯೋಧರು, ನಾವಿಕರು ಮತ್ತು ವಾಯು ಯೋಧರ ಬಗ್ಗೆ ನಾನು ವೈಯಕ್ತಿಕವಾಗಿ ಹೆಮ್ಮೆ ಪಟ್ಟೆ. ಕಳೆದ ಐದು ವರ್ಷಗಳಲ್ಲಿ ಸಶಸ್ತ್ರ ಪಡೆಗಳನ್ನು ಭೇಟಿಯಾಗುವ ಹಾಗೂ ನಮ್ಮ ರಕ್ಷಣಾ ಪಡೆಗಳ ಕುಟುಂಬಗಳ ಸದಸ್ಯರೊಂದಿಗೆ ಸಂವಾದ ನಡೆಸುವ ಅವಕಾಶ ನನಗೆ ಒದಗಿತ್ತು. ನಮ್ಮ ರಕ್ಷಣಾ ಪಡೆಗಳು ಒಂದು ಅದ್ಭುತ ಮಹತ್ಕಾರ್ಯದಲ್ಲಿ ತೊಡಗಿವೆ. ರಾತ್ರಿಯ ಸಮಯದಲ್ಲಿ ದೇಶ ನಿದ್ರಿಸುವಾಗ ನಮ್ಮ ರಕ್ಷಣಾ ಪಡೆಗಳ ಸದಸ್ಯರು ನಮ್ಮನ್ನು ಕಾಯುತ್ತಾ ಎಚ್ಚರದಿಂದಿರುತ್ತಾರೆ. ನಮ್ಮ ರಕ್ಷಣಾ ಪಡೆಗಳ ಧೈರ್ಯ,ಬದ್ಧತೆ ಮತ್ತು ಕರ್ತವ್ಯ ನಿಷ್ಠೆಯನ್ನು ದೇಶ ಪ್ರೋತ್ಸಾದರಗಳಿಂದ ಕಾಣುತ್ತದೆ. ಅದೇ ರೀತಿ, ನಮ್ಮ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಯನ್ನು ಬಲಪಡಿಸಲು ಕಠಿಣ ಪರಿಸ್ಥಿತಿಗಳಲ್ಲಿ ಅಗಾಧ ಕೊಡುಗೆ ನೀಡುತ್ತಿರುವ ನಮ್ಮ ಅರೆ-ಮಿಲಿಟರಿ ಪಡೆಗಳ ಸದಸ್ಯರು, ಆಂತರಿಕ ಭದ್ರತಾ ಪಡೆಗಳೂ ಸೇರಿದಂತೆ ಕೇಂದ್ರ ಮತ್ತು ರಾಜ್ಯಗಳ ಪೋಲಿಸ್ ಸಿಬ್ಬಂದಿಯೊಡನೆ ವಿಚಾರವಿನಿಮಯ ನಡೆಸುವ ಅವಕಾಶ ನನಗೊದಗಿತ್ತು.

ಕೊನೆಯದಾಗಿ ಗೆಳೆಯರೇ, **೨೦೨೦ರ ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಯುವಜನರ ಚಳವಳಿ ಕುರಿತಂತೆ** ನನ್ನ ವಿಚಾರವನ್ನು ಕಾರ್ಯಾರೂಪಕ್ಕೆ ತರುತ್ತಿರುವ ನಾಗರಿಕರ ಗುಂಪೊಂದನ್ನು ನಾನು ಇತ್ತೀಚೆಗೆ ಹೈದ್ರಾಬಾದ್‌ನಲ್ಲಿ ಭೇಟಿಯಾಗಿದ್ದೆ. ಡಾ.ಎನ್.ಬಿ. ಸುದರ್ಶನ್ ಹೈದ್ರಾಬಾದ್‌ನಲ್ಲಿ ಸ್ಥಾಪಿಸಿರುವ ಲೀಡ್ ಇಂಡಿಯಾ ೨೦೨೦ ಪ್ರತಿಷ್ಠಾನ ಜಿಲ್ಲಾ ಆಡಳಿತಗಳ ಸಹಭಾಗಿತ್ವದೊಡನೆ ಆಂಧ್ರ ಪ್ರದೇಶದ ಅನೇಕ ಜಿಲ್ಲೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದೆ. ವಿಶೇಷವಾಗಿ ಮೇಡಕ್ ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ಆಗಿರುವ ಪರಿವರ್ತನೆ ನನ್ನ ಗಮನಕ್ಕೆ ಬಂದಿದೆ. ಜಿಲ್ಲೆಯ ಅಧಿಕಾರಿಗಳ ಪ್ರಕಾರ, ಸ್ವ-ಶಿಸ್ತು, ತಮ್ಮ ತಂದೆ ತಾಯಿಯವರು ಮತ್ತು ಶಿಕ್ಷಕರ ಮೇಲೆ ಪ್ರೀತಿ, ಸಭಾಭೀತಿಯ ನಿವಾರಣೆ ಹಾಗೂ ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕರ್ತವ್ಯ- ಇವುಗಳ ದೃಷ್ಟಿಯಿಂದ ವಿದ್ಯಾರ್ಥಿಗಳ ಮೇಲೆ ತರಬೇತಿಯಿಂದಾಗಿರುವ ಪರಿಣಾಮ ಕಾಣುತ್ತಿದೆ. ಲೀಡ್ ಇಂಡಿಯಾ ತರಬೇತಿ ಶಿಬಿರದಲ್ಲಿ ತೆಗೆದುಕೊಂಡ ೧೦ ಅಂಶಗಳ ಶಪಥದಿಂದ ಸ್ಫೂರ್ತಿಗೊಂಡ ತಾನು ಬೀಡಿ, ಸಿಗರೇಟು ಸೇದುವ ಚಟವನ್ನು ತನ್ನ ತಂದೆಯಿಂದ ಹೇಗೆ ಬಿಡಿಸಿದೆ ಎಂಬುದನ್ನು ನಲಗೊಂಡದ ಆಂಧ್ರಪ್ರದೇಶ ಗುಡ್ಡಗಾಡು ಕಲ್ಯಾಣ ಶಾಲೆಯ ವಿದ್ಯಾರ್ಥಿ

ನಾಯಕಿ ಪದ್ಮಾ ನನಗೆ ವಿವರಿಸಿದಳು. ಇದರಿಂದ ನಮ್ಮ ಯುವಜನರು ಇಂತಹ ಧ್ಯೇಯಸಾಧನೆಗಳ ಪ್ರಾಧಾನ್ಯತೆಯ, ಕಾರ್ಯಕ್ರಮದ ಮೂಲಕ ಸರಿ ದಾರಿಯಲ್ಲಿ ಸಾಗುತ್ತಿದ್ದಾರೆ ಎಂಬ ಭರವಸೆ ನನಗೆ ದೊರೆತಿದೆ. ನಮ್ಮಲ್ಲಿರುವ, ೨೫ ವರ್ಷಗಳಿಗೂ ಕಡಿಮೆ ವಯಸ್ಸಿನ, ಪ್ರಜ್ವಲ ಬುದ್ಧಿಯ ೫೪ ಕೋಟಿ ಯುವಜನರು ಈ ಭೂಮಿಯ ಮೇಲಿನ, ಈ ಭೂಮಿಯ ಕೆಳಗಡೆ ಇರುವ ಅತ್ಯಂತ ಪ್ರಬಲ ಸಂಪನ್ಮೂಲ ಎಂದು ನಾನು ಪರಿಗಣಿಸಿದ್ದೇನೆ ಹಾಗೂ ಮೌಲ್ಯಾಧಾರಿತ ಶಿಕ್ಷಣ ಮತ್ತು ನಾಯಕತ್ವದ ಮೂಲಕ ನಾವು ಈ ಯುವಜನರನ್ನು ಶಕ್ತಗೊಳಿಸಬೇಕಾಗಿದೆ.

ಭಾರತದ ದೃಶ್ಯ ವೈವಿಧ್ಯ, ಅದರ ಭಾವನಾತ್ಮಕ ವಸ್ತು ಹಾಗೂ ನಮ್ಮ ವಿಶಾಲ ನಾಡಿನ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಮನಸ್ಸುಗಳ ಏಕತೆಗೆ ನನ್ನ ಮನಸ್ಸು ಮಿಡಿದಿದೆ. ನಮ್ಮ ಪರಂಪರೆಯ ಶ್ರೀಮಂತಿಕೆ ಹಾಗೂ ಅದನ್ನು ಕಾಪಾಡಲು ಹಲವು ಸಂಸ್ಥೆಗಳು ನಡೆಸುತ್ತಿರುವ ಪ್ರಯತ್ನಗಳ ಒಂದು ಕಿರುನೋಟವನ್ನು ಒದಗಿಸಲು ನಾನು ಈ ಉದಾಹರಣೆಗಳನ್ನು ನೀಡಿದ್ದೇನೆ. ಸಂಸ್ಥೆಗಳು ಮತ್ತು ವ್ಯಕ್ತಿಗಳು ಕೈಗೊಂಡಿರುವ ಅನೇಕ ಹೊಸ ಸಾಹಸಗಳೂ ಇವೆ. ಅವುಗಳಲ್ಲಿ ಹಲವು ನನ್ನ ಅನುಭವಕ್ಕೆ ಬಂದಿದೆ ಹಾಗೂ ನನ್ನ ದೇಶ ಮತ್ತು ಜನತೆಯಿಂದ ನಾನು ಬಹಳಷ್ಟು ಕಲಿತ್ತಿದ್ದೇನೆ. ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯ ಶ್ರೀಮಂತ ಮತ್ತು ವೈವಿಧ್ಯತೆಯ ನಿಧಿಯನ್ನು ಕಾಪಾಡಲು ನಾವು ಬಹಳಷ್ಟು ಮಾಡಬೇಕಾಗಿದೆ. ನಮ್ಮ ಮುಂದಿನ ಪೀಳಿಗೆಗಳಿಗಾಗಿ ಇದನ್ನು ಮಾಡುವುದು ನಮ್ಮ ಕರ್ತವ್ಯ. ದೇಶದಾದ್ಯಂತ ಅನೇಕ ಸಂಸ್ಥೆಗಳ ಸಹಭಾಗಿತ್ವದ ಮೂಲಕ ದೊಡ್ಡ ಪ್ರಮಾಣದಲ್ಲಿ ಇದನ್ನು ಮಾಡಬೇಕು. ನಮ್ಮ ದೇಶ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದೆ, ಕಳೆದ ೬೦ ವರ್ಷಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಕಠಿಣವಾಗಿ ದುಡಿಯುವ ಜನರು ನಮ್ಮಲ್ಲಿದ್ದಾರೆ ಅದರಲ್ಲೂ ದೇಶದ ೫೪ ಕೋಟಿ ಯುವಜನರ ಶಕ್ತಿ ನಮ್ಮಲ್ಲಿದೆ. ನಮ್ಮ ದೇಶದ ಪ್ರತಿಯೊಂದು ವಲಯ ೨೦೨೦ ಕ್ಕೆ ಬಹಳ ಮೊದಲೇ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಬಲ್ಲದು ಎಂಬ ವಿಶ್ವಾಸವನ್ನು ನನಗೆ ನೀಡಿದೆ.

ನಾನು ಭೇಟಿಯಾದ ಯಾರೇ ಆದರೂ, ನಾವು ದೇಶಕ್ಕೆ ಏನು ಮಾಡಬಲ್ಲೇವು ಎಂದು ನನ್ನನ್ನು ಸದಾ ಕೇಳುತ್ತಾರೆ. ಸಮಾಜದ ಅಂತಹ ಸದಸ್ಯರನ್ನು ಶಕ್ತಗೊಳಿಸಲು ನಾವು ಸತತವಾಗಿ ಪ್ರಯತ್ನಿಸಬೇಕು. ಇಂತಹ ಒಂದು ಉತ್ಕಟ ಭಾವನೆಯಿಂದಾಗಿ ನಾವು ಸರಿಯಾದ ಹಾದಿಯಲ್ಲಿರುವ ಬಗ್ಗೆ ನಮಗೆ ಬಹಳ ಸಂತೋಷವಾಗಿದೆ. ಇಲ್ಲಿ ನನಗೆ ಖ್ಯಾತ ಕವನವೊಂದು ನೆನಪಾಗುತ್ತಿದೆ.

ನಕ್ಷತ್ರವೊಂದನ್ನು ನೀನು ಬಯಸುವುದಾದರೆ,
ನೀನು ಯಾರಾದರೇನಂತೆ
ನಿನ್ನ ಹೃದಯದ ಬಯಕೆ
ನಿನ್ನನ್ನು ಸೇರುತ್ತದೆ

ಈ ಕವನ ನಮ್ಮೆಲ್ಲರ ಪಾಲಿಗೂ, ವಿಶೇಷವಾಗಿ ನಮ್ಮ ಯುವಜನರ ಪಾಲಿಗೆ ನಿಜ ಹಾಗೂ ಅವರು ಮಹಾನ್ ಗುರಿಗಳನ್ನು ಇಟ್ಟುಕೊಂಡರೆ ಅವರು ಗುರಿಯ

ಸಮೀಪ ಹೋಗುತ್ತಾರೆ. ಅಥವಾ ಗುರಿಯನ್ನೇ ತಲುಪುತ್ತಾರೆ.

ನನ್ನ ಪ್ರೀತಿಯ ಪ್ರಜೆಗಳೇ, **೨೦೨೦ರ ಅಭಿವೃದ್ಧಿಹೊಂದಿದ ಭಾರತದ ಗುರಿಗಳನ್ನು ಈಡೇರಿಸಲು ಶ್ರಮಿಸುವುದನ್ನು ಮುಂದುವರೆಸಲು ನಿಶ್ಚಯಿಸೋಣ ಹಾಗೂ ಆ ಭಾರತದ ನಿರ್ದಿಷ್ಟ ಸ್ವರೂಪ ಹೀಗಿರಲಿ.**

೧. ಗ್ರಾಮೀಣ ಮತ್ತು ನಗರಗಳನ್ನು ವಿಭಜಿಸುವ ರೇಖೆ ತೆಳುವಾಗಿರುವ ದೇಶ.

೨. ಸಮಾನ ಹಂಚಿಕೆ ಇರುವ ಹಾಗೂ ಶಕ್ತಿ ಮೂಲಗಳು ಮತ್ತು ಗುಣಮಟ್ಟದ ನೀರು ಸಾಕಷ್ಟು ಪ್ರಮಾಣದಲ್ಲಿ ದೊರೆಯುವ ದೇಶ.

೩. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳು ಸಾಮರಸ್ಯದಿಂದ ಶ್ರಮಿಸುವ ದೇಶ.

೪. ಸಾಮಾಜಿಕ ಅಥವಾ ಆರ್ಥಿಕ ಪಕ್ಷಪಾತದಿಂದಾಗಿ ಯಾರೇ ಯೋಗ್ಯ ಅಭ್ಯರ್ಥಿಗಳು ಮೌಲ್ಯ ವ್ಯವಸ್ಥೆಯ ಶಿಕ್ಷಣದಿಂದ ವಂಚಿತರಾಗದೆ ಇರುವ ದೇಶ.

೫. ಅತ್ಯಂತ ಪ್ರತಿಭಾನ್ವಿತ ವಿದ್ವಾಂಸರು, ವಿಜ್ಞಾನಿಗಳು ಮತ್ತು ಬಂಡವಾಳ ಹೂಡಿಕೆದಾರರು ತಲುಪಬಯಸುವ ಅತ್ಯುತ್ತಮ ಪ್ರದೇಶ ಹೊಂದಿರುವ ದೇಶ.

೬. ಅತ್ಯುತ್ತಮ ಆರೋಗ್ಯ ರಕ್ಷಣೆ ಎಲ್ಲರಿಗೂ ಲಭ್ಯವಿರುವ ದೇಶ.

೭. ಸ್ಪಂದಿಸುವ, ಪಾರದರ್ಶಕವಾದ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತವಿರುವ ದೇಶ.

೮. ದಾರಿದ್ರ್ಯವನ್ನು ಸಂಪೂರ್ಣವಾಗಿ ನಿವಾರಿಸುವ, ಅನಕ್ಷರತೆಯನ್ನು ತೊಡೆದು ಹಾಕಿರುವ, ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಅಪರಾಧಗಳಿಲ್ಲದ ಹಾಗೂ ಸಮಾಜದಲ್ಲಿ ಯಾರೂ ತಾನು ಹೊರಗಿನವನು ಎಂದು ಭಾವಿಸದ ದೇಶ.

೯. ಒಂದು ಏಳಿಗೆಯ, ಆರೋಗ್ಯವಂತ, ಸುಭದ್ರ ಶಾಂತಿಯುತ ಹಾಗೂ ಸುಖಿಯಾದ ಮತ್ತು ತಾಳಿಕೆಯ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತಲೇ ಇರುವ ದೇಶ.

೧೦. ಜೀವಿಸಲು ಅತ್ಯುತ್ತಮ ಸ್ಥಳಗಳಲ್ಲಿ ಒಂದಾದ ಹಾಗೂ ತನ್ನ ನಾಯಕತ್ವದಲ್ಲಿ ಹೆಮ್ಮೆ ಪಡುವ ದೇಶ.

ಕೊನೆಯದಾಗಿ ನಿಮ್ಮ ಸಹಕಾರ ಮತ್ತು ಬೆಂಬಲದಿಂದ ಕಳೆದ ಐದು ವರ್ಷಗಳುದ್ದಕ್ಕೂ ನಿಮ್ಮ ಪ್ರೀತಿ ವಿಶ್ವಾಸಗಳನ್ನು ನನ್ನ ಮೇಲೆ ಹರಿಸಿದ್ದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರೀತಿಯ ಪ್ರಜೆಗಳೇ, ನನ್ನ ಜೀವನದ ಪರಮ ಧ್ಯೇಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಮೂಲಕ ನನ್ನ ಭಾಷಣವನ್ನು ಮುಗಿಸುತ್ತೇನೆ. ನಮ್ಮ ಬಹು ಸಂಸ್ಕೃತಿಯ ಸಮಾಜದಲ್ಲಿ ಭಾರತದ ಜನತೆಯ ನೂರುಕೋಟಿ ಹೃದಯಗಳು ಮತ್ತು ಬುದ್ಧಿಗಳ ನಡುವೆ ಸಂಪರ್ಕ ಉಂಟುಮಾಡುವುದು ಹಾಗೂ "ನಾವು ಮಾಡಬಲ್ಲೆವು" ಎಂಬ ಆತ್ಮವಿಶ್ವಾಸವನ್ನು ಭದ್ರವಾಗಿ ನಾಟುವುದು. –ಇದೇ ನನ್ನ ಪರಮ ಧ್ಯೇಯ. ಪ್ರೀತಿಯ ಪ್ರಜೆಗಳೇ, ೨೦೨೦ಕ್ಕೆ ಮುನ್ನ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಮಹಾನ್ ಕಾರ್ಯದಲ್ಲಿ ನಾನು ಸದಾ ನಿಮ್ಮೊಂದಿಗಿರುತ್ತೇನೆ.

ಭಗವಂತ ನಿಮ್ಮನ್ನು ಹರಸಲಿ, ಜೈ ಹಿಂದ್.

– ಸಾಭಾರ–ಆಕಾಶವಾಣಿ

* * *

ತನ್ನನ್ನು ತಾನು ಬಿಚ್ಚಿಕೊಳ್ಳುವ ಸತ್ಯದ ಪರೀಕ್ಷೆಯ ಹಾಗೂ ಇರುವಿಕೆಯ ಒರೆಗಲ್ಲನ್ನಾಗಿ ಮಾಡಿದರು. ಸತ್ಯದ ಗುರಾಣಿಯ ಎರಡು ಪಕ್ಕಗಳಾದ ಕಠಿಣ ಶಿಸ್ತು ಗಾಂಧೀಯಲ್ಲಿಯೂ ಮತ್ತು ಸೃಜನಶೀಲತೆಯು ಕವಿಯಲ್ಲಿಯೂ ಕಾಣಿಸಿಕೊಂಡವು. ಉದಾಹರಣೆಗೆ ಬುದ್ಧನ ವಿಗ್ರಹವನ್ನು ರಚಿಸಲು ಟಾಗೋರರವರಿಗೆ ಹೇಳಿದರೆ ಬದುಕಿನ ಹೋರಾಟ ಮತ್ತು ದುಃಖಗಳನ್ನು ಜಯಿಸಿದ ಶಾಂತಮೂರ್ತಿ ಜ್ಞಾನಿಬುದ್ಧನನ್ನು ತಮ್ಮ ಹಸ್ತಕಲೆಯಲ್ಲಿ ತೋರಿಸುತ್ತಿದ್ದರೇನೋ. ಆದರೆ ಗಾಂಧೀ ಅದೇ ಬುದ್ಧನನ್ನು ಮಾನವ ದೌರ್ಬಲ್ಯಗಳ ವಿರುದ್ಧ ಒಂದಾದ ಮೇಲೊಂದರಂತೆ ಹೋರಾಡಿದವನ ಪ್ರತಿನಿಧಿಯನ್ನಾಗಿ ತೋರಿಸುತ್ತಿದ್ದರು. ಹೀಗೆ ಗಾಂಧಿ ಮತ್ತು ಟಾಗೋರರಲ್ಲಿ ಸತ್ಯದ ಈ ಮುಖಗಳು ಚಿತ್ರತವಾಗಿವೆ. ಮಧ್ಯಕಾಲಿನ ಭಾರತದ ಮುಮುಕ್ತಿಯೊಬ್ಬ ಸನಿಹ ಹಾಗೂ ದೂರದ ಮಧ್ಯೆ ಕುರಿತು ಭಾವಾವಶವನ್ನಾಗಿ ಮಾಡುವಂಥ ಕಾಲ್ಪನಿಕ ಐಕ್ಯತಾ ಗಾನದ ಪದಪುಂಜ ಹೀಗಿದೆ:-

" ಎಲೈ ಹಕ್ಕಿಯೇ, ನೀನು ರಾತ್ರಿಯನ್ನೆಲ್ಲ ಗೂಡಿನಲ್ಲಿ ಕಳೆದೆ. ಆಗ ನಿನ್ನೀ ಹಾಡು ಎಲ್ಲಿತ್ತು? ಆದರೆ ಸೂರ್ಯೋದಯವಾಗುತ್ತಲೇ ಆಗಸವೆಲ್ಲ ನಿನ್ನ ಇಂಚರದಿಂದ ಪ್ರತಿಧ್ವನಿತಗೊಳ್ಳುತ್ತಿದೆ. ಇದೆಂಥ ರಹಸ್ಯ? ಪ್ರತಿಯೊಂದು ರೆಕ್ಕೆ ಬಡಿತದಲ್ಲಿಯೂ ಅಪಾಯವಿರುವ, ದಿಕ್ಕುದೆಶೆಯಿಲ್ಲದ ಆಕಾಶದಲ್ಲಿ ಹಾರಾಡಲು ನಿನಗೆ ಭಯವಿಲ್ಲವೆ? ಗೂಡನ್ನು ಬಿಟ್ಟು ಬಂದ ಸ್ವಲ್ಪ ಮಂದ ಬುದ್ಧಿಯವ ನೀನು ಎಂದೆನಿಸುವುದಿಲ್ಲವೆ?

ಆ ಹಕ್ಕಿ ಉತ್ತರಿಸುತ್ತದೆ: ಅದು ಸತ್ಯ. ನಾನು ಗೂಡಿನಲ್ಲಿ ಇದ್ದಷ್ಟು ಕಾಲ ಗೂಡು ಚಿಕ್ಕದಾಗಿಯೂ, ಸುರಕ್ಷಿತವಾಗಿಯೂ ಇತ್ತಲ್ಲದೆ, ಸಮೃದ್ಧವಾಗಿಯೂ ಇತ್ತು. ಎಲ್ಲ ಬಗೆಯ ಸಾಹಸ ಮತ್ತು ಭಯಗಳಿಂದ ಕೂಡಿದ ಅನಂತದಲ್ಲಿ ನಾನು ನೆಗೆದೊಡನೆ ನನಗೆ ನನ್ನ ಆತ್ಮದ ನಿಜ ಅರಿವಾಯಿತು."

ಗಾಂಧೀಜಿ ಮತ್ತು ಗುರುದೇವರಿಬ್ಬರೂ ಹೃದಯದಾಳದಿಂದ ಆಧ್ಯಾತ್ಮಿಕರಾಗಿದ್ದರು. ಅವರಿಬ್ಬರನ್ನು ಹೋಲಿಕೆ ಮಾಡುವುದಾದರೆ, ಒಬ್ಬರು ತಮ್ಮ ಜೀವನದುದ್ದಕ್ಕೂ ನೈತಿಕತೆಯ ಮೇಲಿನ ಪ್ರೇಮಕ್ಕೆ ಒತ್ತು ಕೊಟ್ಟಿದ್ದರೆ, ಇನ್ನೊಬ್ಬರು ಪ್ರೇಮದ ಮೇಲಿನ ನೈತಿಕತೆಗೆ ಒತ್ತುಕೊಟ್ಟಿದ್ದರು. ಹಾಗೆ ನೋಡಿದರೆ, ಪ್ರೇಮ ಮತ್ತು ನೈತಿಕತೆ ಒಂದೇ ನಾಣ್ಯದ ಎರಡು ಮುಖಗಳು. ಇವು ತಲೆ ಎತ್ತುವುದು ಒಬ್ಬ ಇನ್ನೊಬ್ಬನನ್ನು ಭೇಟಿಯಾದಾಗ. ಒಬ್ಬನೇ ತನ್ನ ಪಾಡಿಗೆ ತಾನು ಒಂಟಿಯಾಗಿ ಕಾಡಿನಲ್ಲಿದ್ದರೆ ನೈತಿಕತೆಯ ಅಗತ್ಯವೇ ಇರುವುದಿಲ್ಲ. ಇನ್ನೊಬ್ಬನೊಂದಿಗೆ ಅವನ ಸಂಪರ್ಕ ಉಂಟಾಗುತ್ತಲೇ ಅವನ ಹೃದಯದಲ್ಲಿ ಪ್ರೇಮದ ಬುಗ್ಗೆ ಚಿಮ್ಮುತ್ತದೆ ಮತ್ತು ಅದರೊಂದಿಗೆ ವ್ಯವಹಾರಕ್ಕೆ ಅಗತ್ಯವಾದ ಕೆಲ ನಿಯಮಗಳು ಕೂಡ ಉದಯಿಸುತ್ತವೆ. ಹಾಗಿಲ್ಲವಾದಲ್ಲಿ ಪರಸ್ಪರರು ಸೌಹಾರ್ದದಿಂದಲೂ, ಪ್ರೇಮದಿಂದಲೂ ವ್ಯವಹರಿಸಲು ಸಾಧ್ಯವಾಗುವುದಿಲ್ಲ.

ಹೀಗೆ, ನೈತಿಕತೆ ಮತ್ತು ಪ್ರೇಮಗಳು ಧರ್ಮವೆಂಬ ಮರದ ಅಂದರೆ ಸದಾ ಬೆಳೆಯುವ ಮತ್ತು ವಿಶಾಲವಾಗಿ ಹರಡುವ ಜೀವನವೆಂಬ ಆಲದ ಮರದ

ಮೂಲ ಬೇರುಗಳು. ಆದ್ದರಿಂದ ವಿಶ್ವ ನಿಯಮವೊಂದು ಅಥವಾ ಯಾವುದೋ ಅತಿಶಯ ಶಕ್ತಿಯೊಂದು ಇಡೀ ಬ್ರಹ್ಮಾಂಡವನ್ನು ಸೃಷ್ಟಿಸಿದೆ ಮತ್ತು ಕಾಪಾಡುತ್ತದೆಂದು ಜನರು ಭಾವಿಸುತ್ತಾರೆ. ತತ್ಪರಿಣಾಮವಾಗಿ ಕೆಲವರು ಸತ್ಯವೆಂಬ ದೇವರನ್ನು ಸಾಕ್ಷಾತ್ಕರಿಸಿಕೊಂಡರೆ ಇನ್ನು ಕೆಲವರು ದೇವರೆಂಬ ಸತ್ಯವನ್ನು ತಮ್ಮ ನೈತಿಕತೆಯ ಶಿಸ್ತು ಬದ್ಧತೆಯಿಂದ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಇನ್ನು ಕೆಲವರು ಪ್ರೇಮದ ಶಿಸ್ತಿನಿಂದ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಆದರೆ ಇವೆರಡೂ ಬಲವತ್ತರವಾದುವೇ, ಮತ್ತು ನಿಜ ಧರ್ಮ ಕೂಡ. ಆದರೆ ಪ್ರತಿಯೊಬ್ಬರು ಆ ಪರಮಾತ್ಮನತ್ತ ಹೋಗಲು ತಮ್ಮದೇ ಆದ ದಾರಿ ಹಿಡಿಯುತ್ತಾರೆ. ಆದ್ದರಿಂದ ಮನುಷ್ಯರು ದೇವರನ್ನು ಮುಟ್ಟುವ ದಾರಿಗಳು ಧರ್ಮ ಅಥವಾ ಸತ್ಯದ ಬಗ್ಗೆ ಎಷ್ಟೊಂದು ಅವತರಣಿಕೆ ಅಥವಾ ಅಭಿಪ್ರಾಯಗಳಿವೆಯೋ ಅಷ್ಟೊಂದು ಅಸಂಖ್ಯವಾಗಿವೆ. ಎಲ್ಲ ನದಿಗಳು ಸಾಗರದತ್ತ ಹರಿಯುವಂತೆಯೇ ಸತ್ಯದ ಆರಾಧಕನೂ ತನ್ನದೇ ಆದ ಶಿಸ್ತು, ಶ್ರದ್ಧೆ ಅಥವಾ ಕರ್ತವ್ಯದ ದಾರಿಯಲ್ಲಿ ಸಾಗುತ್ತ ಸರ್ವವನ್ನೂ ವ್ಯಾಪಿಸಿರುವ ಅಸ್ತಿತ್ವದ ಅಥವಾ ನೈತಿಕ ನಿಯಮದ ಸ್ಥೂಲ ದರ್ಶನ ಪಡೆಯುತ್ತಾನೆ. ಏಕೆಂದರೆ ಸತ್ಯದ ಸಮಗ್ರತೆಯನ್ನು ತಿಳಿಯಲು ಮನುಷ್ಯನಿಗೆ ಸಾಧ್ಯವಿಲ್ಲ. ಪರಿಪೂರ್ಣವಾಗಿರುವ ಮನುಷ್ಯ ಮಾತ್ರ ಸತ್ಯದ ಪರಿಪೂರ್ಣತೆಯನ್ನು ಸಾರರೂಪದಲ್ಲೂ ಸಮಗ್ರತೆಯಲ್ಲೂ ನೋಡಬಲ್ಲ. ಆದ್ದರಿಂದ ಜಗತ್ತಿನ ವಿವಿಧ ಧರ್ಮಗಳನ್ನು ಅನುಸರಿಸುವ ಜನರು ಆನೆಯನ್ನು ಮುಟ್ಟಿನೋಡುವ ಆರು ಜನ ಕುರುಡರಂತಿದ್ದಾರೆ. ಅವರಿಗೆ ಆ ರಾಜಠೀವಿ ಆ ಪ್ರಾಣಿಯ ಅಲ್ಪ ಪರಿಚಯವಾಯಿತೆ ಹೊರತು ಅದರ ಕುರಿತಾದ ಪೂರ್ಣ ಸತ್ಯದ ಪರಿಚಯವಾಗಲಿಲ್ಲ. ಆದಾಗ್ಯೂ ಆ ಪ್ರತಿಯೊಬ್ಬರ ಹೇಳಿಕೆಯಲ್ಲಿ ಸತ್ಯದ ಕೊಂಚ ಅಂಶ ಅಥವಾ ಸುಳಿವು ಇತ್ತು.

ಧರ್ಮ ಎಲ್ಲವನ್ನೂ ಒಳಗೊಂಡಿದೆ ಮತ್ತು ಎಲ್ಲೆಡೆಯೂ ಕ್ರಿಯಾತ್ಮಕವಾಗಿದೆ. ಮನುಷ್ಯ ಕೇವಲ ಅನ್ನ ಊಟ ಮಾಡಿ ಬದುಕುವುದಿಲ್ಲ. ಅವನಿಗೆ ಧರ್ಮವೂ ಬೇಕು.ಆದ್ದರಿಂದ ಪ್ರತಿಯೊಂದು ಧರ್ಮವೂ ಅನುಭಾವದ ತಿರುಳನ್ನೂ, ಸಾಮಾಜಿಕ– ನೈತಿಕ ಅಂಶವನ್ನೂ ಹೊಂದಿರುತ್ತದೆ. ಅಂದರೆ ಸತ್ಯದ ನೋಟ ಮತ್ತು ಅದರತ್ತ ಹೋಗುವ ದಾರಿಯನ್ನು ಹೊಂದಿರುತ್ತದೆ. ಅವೆರಡೂ ಒಂದೇ ಹಕ್ಕಿಯ ಎರಡು ರೆಕ್ಕೆಗಳಿದ್ದಂತೆ; ಆಗಸದಲ್ಲಿ ಹಾರಲು ಹಕ್ಕಿಗೆ ರೆಕ್ಕೆ ಅಗತ್ಯ. ಧರ್ಮ ಬದುಕಿನಂತೆಯೇ ಕಲಾತ್ಮಕವಾಗಿ ಒಂದುಗೂಡಿದ ಬಹುರಂಜಿತ ಬಣ್ಣಗಳ ಒಂದು ಗೋಲ:– ಆದರ್ಶಗಳು, ಪ್ರೇರಣೆಗಳು ಕ್ರಿಯೆಗಳು ಮತ್ತು ವಿಚಾರಗಳು.

ಅನು – ಸು.ಕೌ.

* * *

ಜನಪದ ವ್ಯಕ್ತಿ

ಶೇಷನಾರಾಯಣ

ಒಂದು ಶತಮಾನದಿಂದಲೂ ಇರುವ ಕಾವೇರಿ ವಿವಾದದ ಅಂತರಂಗವನ್ನು ಕುರಿತು ನಮ್ಮಲ್ಲೆಲ್ಲೂ ಒಳ್ಳೆಯ ಪುಸ್ತಕಗಳಿಲ್ಲ. ಅತ್ತ ತಮಿಳುನಾಡಿನಲ್ಲೂ ಯಾರೂ ಏನೂ ಬರೆದಂತಿಲ್ಲ. ಒಟ್ಟಿನಲ್ಲಿ ಈ ವಿವಾದದ ಬಗೆಗಿನ ಮಾತೆಲ್ಲ ಕುರುಡರು ಆನೆ ಮುಟ್ಟಿದ ಕತೆಯಂತೆಯೇ ಇದೆ. ಮಾಧ್ಯಮಗಳಲ್ಲಿ ಬಂದಿದ್ದಷ್ಟೆ ನಿಜ ಎನ್ನುವ ಭ್ರಮೆ ಆವರಿಸಿಕೊಳ್ಳುತ್ತದೆ. ಸುದ್ದಿ ಜಗತ್ತಿನ ಮಿತಿಯೂ, ಸಾಹಿತ್ಯದ ಶಕ್ತಿಯೂ ಗೊತ್ತಾಗುವುದು ಇಂಥ ಸಂದರ್ಭಗಳಲ್ಲೇ. ಈ ಕೊರತೆಯ ಬಗ್ಗೆ ನಮ್ಮ ನಡುವೆ ಗಾಢವಾಗಿ ಯೋಚಿಸಿದವರು ನಮ್ಮ ಹಿರಿಯ ಲೇಖಕ ಶೇಷನಾರಾಯಣ.

ಶೇಷನಾರಾಯಣರಿಗೆ ಇಂಥ ತುಡಿತ ಹುಟ್ಟಲು ಕಾರಣ, ಅವರ ಬದುಕಿನ ಚಿತ್ರ ವಿಚಿತ್ರ ಸಂದರ್ಭಗಳು. ಅವರು ಮೈಸೂರು, ಬೆಂಗಳೂರು, ಮದರಾಸು ಹೀಗೆ ಎಲ್ಲೆಲ್ಲೋ ಬದುಕಿನ ಜತೆ ಸೆಣೆಸಿದವರು. ಮದರಾಸಿನಲ್ಲಿ ಇದ್ದಾಗಲಂತೂ ಅವರಿಗೆ 'ಕರ್ನಾಟಕದವರು ಕಾವೇರಿ ನೀರನ್ನು ಹಿಡಿದಿಟ್ಟುಕೊಂಡಿರುತ್ತಾರೆ. ಆದರೆ ನಮಗೆ ಮಾತ್ರ ಬಿಡದೆ ಮೋಸ ಮಾಡುತ್ತಿದ್ದಾರೆ' ಎಂಬ ಮಾತನ್ನು ಕೇಳಿ ಕೇಳಿ, ಅದು ನಿಜವೇ ಅನ್ನಿಸಿ ಬಿಟ್ಟಿತ್ತಂತೆ!

೭೦ರ ದಶಕದ ಉತ್ತರಾರ್ಧದ ಅನುಭವವೇ ಅವರಿಗೆ ಕಾವೇರಿ ವಿವಾದದ ಮೇಲೊಂದು ಸರಿಯಾದ ಪುಸ್ತಕ ಬರೆಯಬೇಕೆಂಬ ಕನಸು ಹುಟ್ಟಿಸಿದ್ದು. ಆದರೆ ಬರೆಯಲು ಶುರು ಮಾಡುವ ಹೊತ್ತಿಗೆ ಅವರಿಗೆ ತಮ್ಮ ಬಳಿ ಸಮಗ್ರ ಮಾಹಿತಿ ಇಲ್ಲ ಎಂದು ಜ್ಞಾನೋದಯವಾಯ್ತಂತೆ! ಹೀಗಾಗಿ ಅವರು ಕಾವೇರಿಯ ಬಗ್ಗೆ ಸಿಕ್ಕ ಸಕ್ಕ ಪುಸ್ತಕ, ಕಂಡಕಂಡ ಇಲಾಖೆ, ಅವರಿವರು ಹೇಳಿದ ಹಳೆಗನ್ನಡ ಕಾವ್ಯಗಳು, ತಮಿಳಿನ ಆದಿಕಾವ್ಯಗಳು, ಇಂಗ್ಲಿಷ್ ಪುಸ್ತಕಗಳು, ಸರಕಾರದ ವರದಿಗಳು ಹೀಗೆ ಎಲ್ಲವನ್ನೂ ಅಧ್ಯಯನ ಮಾಡಲು ಶುರು ಮಾಡಿದರು; ಜತೆಯಲ್ಲೇ ಸಾವಿರಾರು ಪುಟಗಳಷ್ಟು ಟಿಪ್ಪಣಿಗಳನ್ನೂ ಮಾಡುತ್ತಾ ಬಂದರು! ಹೀಗೆ ಅವರು ;ಕಾವೇರಿ ಅಧ್ಯಯನಕ್ಕೆ ಬರೋಬ್ಬರಿ ೨೫ ವರ್ಷಗಳನ್ನು ವಿನಿಯೋಗಿಸಿದ್ದಾರೆ!

ಇಷ್ಟೆಲ್ಲ ಆದಮೇಲೆ ಅವರು ಪುಸ್ತಕ ಬರೆಯಲು ಶುರು ಮಾಡಿದ್ದು ೧೯೯೮ರಲ್ಲಿ ಆಮೇಲೆ ಇದಕ್ಕೆ ಹಿಡಿದಿದ್ದು ಮತ್ತೆ ಭರ್ತಿ ಐದು ವರ್ಷ! ಇಷ್ಟರ ಮಧ್ಯೆ ಅವರು, ಪುಸ್ತಕ ಬರೀ ಮಾಹಿತಿಯ ಕಣಜವಾದರೆ ಸಾಲದು, ನದೀತೀರದ ನೇರ ದರ್ಶನವಾಗಬೇಕು, ಅಲ್ಲಿಯ ಜನರನ್ನು ನೋಡಬೇಕು ಎಂದುಕೊಂಡು ಕಾವೇರಿ ಹರಿಯುವ ೮೦೦ ಕಿ. ಮೀ. ಉದ್ದಕ್ಕೂ ಇರುವ ಅನೇಕ ಸ್ಥಳಗಳಿಗೆ ಭೇಟಿ ಕೊಟ್ಟಿದ್ದಾರೆ. ಎರಡೂ ರಾಜ್ಯಗಳ ರೈತ ನಾಯಕರನ್ನು ಮಾತನಾಡಿಸಿದ್ದಾರೆ.

ಚೋಳರ ಕಾಲದಿಂದ ಹಿಡಿದು ಮೊನ್ನೆ ಮೊನ್ನೆಯವರೆಗೆ ಆಗಿರುವ ಕಾವೇರಿ ಸಂಬಂಧದ ಬೆಳವಣಿಗೆಗಳನ್ನೆಲ್ಲ ತಿಳಿದುಕೊಂಡಿದ್ದಾರೆ. ಒಟ್ಟಿನಲ್ಲಿ 'ಕಾವೇರಿ ವಿವಾದದ ಬಗ್ಗೆ ಕರ್ನಾಟಕದ ಬಗ್ಗೆ ಮೂಡಿರುವ ತಪ್ಪು ಅಭಿಪ್ರಾಯ, ನೆರೆಹೊರೆಯವರು ಹೊಂದಿರುವ ಅವಾಸ್ತವಿಕ ಗ್ರಹಿಕೆಗಳನ್ನು ಹೋಗಲಾಡಿಸ ಬೇಕು ಎಂಬ ಬಯಕೆಯೇ 'ಕಾವೇರಿ ಒಂದು ಚಿಮ್ಮು ಒಂದು ಹೊರಳು' ಪುಸ್ತಕ ರಚನೆಯ ಸಾಹಸಕ್ಕೆ ಕೈಹಾಕುವಂತೆ ಮಾಡಿತು' ಎನ್ನುತ್ತಾರೆ ೮೦ರ ಉತ್ಸಾಹಿ ಶೇಷನಾರಾಯಣ.

ಅಂದ ಮಾತ್ರಕ್ಕೆ ಇದು ಕೇವಲ ಕಾವೇರಿ ವಿವಾದದ ಬಗೆಗಿನ ವಾದ–ವಿವಾದದ ಶುಷ್ಕ ಸಂಗ್ರಹವಲ್ಲ. ಅದರ ಸಾರಸಂಗ್ರಹವೂ ಅಲ್ಲ. ಇಲ್ಲಿ ಕಾವೇರಿ ನದಿಯ ಬಗ್ಗೆ ನಮ್ಮ ಮಹಾಕಾವ್ಯಗಳಲ್ಲಿ ಹೇಳಿರುವ ಮಾತು, ಪುರಾಣಗಳಲ್ಲಿ ಬರುವ ಪ್ರಸ್ತಾಪ, ಕನ್ನಡ ಕಾವ್ಯಗಳಲ್ಲಿ. ಜಾನಪದದಲ್ಲಿ ಬರುವ ವರ್ಣನೆ, ಕರಿಕಾಲ ಚೋಳ ಸಾವಿರ ವರ್ಷಗಳ ಹಿಂದೆಯೇ ಕಾವೇರಿ ನದಿಗೆ ತಿರುಚಿನಾಪಳ್ಳಿ ಬಳಿ ಕಟ್ಟಿದ ಅಣೆಕಟ್ಟು (ಗ್ರ್ಯಾಂಡ್ ಅಣೆಕಟ್ಟು), ತಮಿಳುನಾಡು ೧೫೦೦ ವರ್ಷಗಳಿಂದಲೂ ಕಾವೇರಿ ನೀರನ್ನು ಪ್ರಶ್ನಾತೀತವಾಗಿ ಬಳಸುತ್ತಿರುವ ಇತಿಹಾಸ, ಅದಕ್ಕೆ ಕಾರಣವಾದ ಘಟನೆಗಳು, ಮೈಸೂರು ಒಡೆಯರ ಕಾಲದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಕನ್ನಂಬಾಡಿ ಕಟ್ಟೆ ನಿರ್ಮಿಸಿ ಮಾಡಿದ ಸಾಹಸ, ೧೯೨೪ರಲ್ಲಾದ ಎರಡು ಅನಾಹುತಕಾರಿ ಒಪ್ಪಂದಗಳು, ಕಾವೇರಿಯನ್ನು ಹಿಡಿದುಕೊಂಡು ಎರಡೂ ರಾಜ್ಯಗಳಲ್ಲಿ ನಡೆಯುತ್ತಿರುವ ರಾಜಕೀಯ, ಬೃಹತ್ ಅಣೆಕಟ್ಟೆಗಳು ತಂದೊಡ್ಡುವ ಸಮಸ್ಯೆಗಳು, ಪೂರಕ ಅಂಕಿಅಂಶಗಳು, ತಮಿಳುನಾಡು ಪಡೆದುಕೊಂಡಿರುವ ಲಾಭ, ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯ, ಕಾವೇರಿ ತೀರದಲ್ಲಿರುವ ಪುಣ್ಯಕ್ಷೇತ್ರಗಳ ವಿವರ, ಗಂಗಾ– ಕಾವೇರಿ ಜೋಡಣೆ ಕನಸಿನ ಅಸಂಭಾವ್ಯತೆ ಹೀಗೆ ಎಲ್ಲದರ ಬಗ್ಗೆಯೂ ಖಚಿತವಾಗಿ ಬರೆದಿದ್ದಾರೆ. ಇಷ್ಟೇ ಅಲ್ಲ ಈ ವಿಚಾರ ತಮಿಳರಿಗೂ ಗೊತ್ತಾಗಬೇಕೆಂದು ತಮ್ಮ ಕೃತಿಯ ತಮಿಳು ಅನುವಾದವನ್ನೂ ಅವರೇ ಒಂದು ವರ್ಷ ಪಟ್ಟಾಗಿ ಕೂತು ಪೂರೈಸಿದ್ದಾರೆ. ತಮಿಳು ಆವೃತ್ತಿಯು ಈಗಾಗಲೆ ಬಿಡುಗಡೆಗೊಂಡಿದೆ.

ಹೀಗಾಗಿ ಈ ಪುಸ್ತಕವನ್ನು ಸಾಹಿತ್ಯದ ವಿದ್ಯಾರ್ಥಿ, ಇತಿಹಾಸಪ್ರಿಯ, ಪ್ರವಾಸಾಸಕ್ತ, ಹುಟ್ಟು ಹೋರಾಟಗಾರ, ಗಂಭೀರ ಅಧ್ಯಯನಕಾರ, ನಾಡಿನ ಬಗ್ಗೆ ಕಳಕಳಿಯುಳ್ಳ ರಾಜಕಾರಣಿ, ಕುತೂಹಲವುಳ್ಳ ಮಣ್ಣಿನ ಮಕ್ಕಳು ಹೀಗೆ ಎಲ್ಲರೂ ಆಪ್ತವಾಗಿ ಓದಬಹುದು. ಅಂದಹಾಗೆ ಶೇಷನಾರಾಯಣ ಅವರು ಓದಿರುವುದು ಬರೀ ನಾಲ್ಕನೇ ಕ್ಲಾಸು ಅಂದರೆ ನಂಬುತ್ತೀರಾ? 'ಕಾವೇರಿ: ಒಂದು ಚಿಮ್ಮು ಒಂದು ಹೊರಳು', ೫೦ ವರ್ಷಗಳ ಕಾಲ ಅಖಂಡವಾಗಿ ಸಾಹಿತ್ಯ ರಚಿಸಿರುವ ಈ ಹಿರಿಯ ಲೇಖಕರ ಶಿಖರಪ್ರಾಯವಾದ, ಅಪೂರ್ವ ಕೃತಿ.

* * *

ತಾಜ್ ಮಹಲ್ ವಿರುದ್ಧ ವಂಡರ್ ಗಪ್ಪೆ

– *ನಾಗೇಶ ಹೆಗಡೆ*

ತಾಜ್ ಮಹಲನ್ನು ಜಗತ್ತಿನ ಏಳು ಅದ್ಭುತಗಳ ಹೊಸ ಪಟ್ಟಿಯಲ್ಲಿ ಸೇರಿಸಲೆಂದು ಏನೆಲ್ಲ ಯತ್ನಗಳು ನಡೆದಿವೆ. ಎಲ್ಲ ಮಾಧ್ಯಮಗಳಲ್ಲೂ ಚರ್ಚೆ ನಡೆದಿದೆ. ಈವರೆಗೆ ಅದಕ್ಕಿದ್ದ ಮಾನ್ಯತೆಗೆ ಚ್ಯುತಿ ಬಾರದಂತೆ ಇ-ಮೇಲ್, ಎಸ್.ಎಮ್.ಎಸ್ ಮೂಲಕವೂ ಜನಾಗ್ರಹ ಮೂಡಿಸುವ ರಾಷ್ಟ್ರವ್ಯಾಪಿಯತ್ನ ನಡೆದಿದೆ. ಹೊಸ ಅದ್ಭುತಗಳ ಪಟ್ಟಿಯಲ್ಲಿ ಅದು ಸೇರಿತೊ ಇಲ್ಲವೊ ಎಂಬುದು ಓದುಗರ ಕೈಗೆ ಈ ಸಂಚಿಕೆ ಸೇರುವಷ್ಟರಲ್ಲಿ ಗೊತ್ತಾಗಿರುತ್ತದೆ.

ಸೇರಲಿ, ಬಿಡಲಿ ಅದು ಅಷ್ಟೇನೂ ಪ್ರಸ್ತುತವೆಂದು ನನಗನ್ನಿಸುವುದಿಲ್ಲ. ಚರಿತ್ರೆಯ ಆದಿಯಿಂದಲೂ ಮನುಷ್ಯ ಅದೆಷ್ಟೇ ಸುಂದರವಾದ, ಅದೆಷ್ಟೇ ಗಟ್ಟಿಮುಟ್ಟಾದ ಸ್ಮಾರಕಗಳನ್ನು ನಿರ್ಮಿಸಿದರೂ ಪ್ರಕೃತಿಯ ದೃಷ್ಟಿಯಲ್ಲಿ ಅವೆಲ್ಲ ಅಪ್ರಸ್ತುತವೇ ಆಗಿರುತ್ತವೆ. ಮನುಷ್ಯ ನಿರ್ಮಿಸಿದ ಯಾವುದೂ ಅದರ ದೃಷ್ಟಿಯಲ್ಲಿ ಸುಂದರವಲ್ಲ: ಯಾವುದೂ ಶಾಶ್ವತವಾಗಿರಲು ಯೋಗ್ಯವಾಗಿಲ್ಲ. ಶಕ್ತಿಶಾಲಿ ಚಕ್ರವರ್ತಿಗಳು ಸಾವಿರಾರು ಕೂಲಿಗಳ/ಕೈದಿಗಳ ನೆರವಿನಿಂದ ಕಟ್ಟಿದ ಕೋಟೆಗಳನ್ನು, ಸೇತುವೆಗಳನ್ನು, ಮಹಲುಗಳನ್ನು ನಿಸರ್ಗ ತನ್ನ ತೀರ ದುರ್ಬಲ ಶಕ್ತಿಗಳನ್ನೇ ಬಳಸಿ ಕೆಡವಿ ಹಾಕುತ್ತದೆ. ಕುಳಿರ್ಗಾಳಿ, ಇಬ್ಬನಿ ಬಿಂದು, ಮಿಡಿತೆರೆ, ಹಿಮಪಕಳೆ, ಹೊಂಬಿಸಿಲು, ಹಸಿ ಬೀಜ ಕೂಡ ಕಾಲ ಕ್ರಮೇಣ ದೊಡ್ಡ ಕೋಟೆಗಳನ್ನು ಶಿಥಿಲಗೊಳಿಸಿ ಕೆಡವುತ್ತದೆ. ಅದು ಕಾಂಬೋಡಿಯಾದ ಆಂಕೊರ್ ವಾಟ್ ದೇಗುಲ ಸಮುಚ್ಚಯವೇ ಇರಬಹುದು; ಪೆರುವಿನ ಇಂಕಾ ಜನಾಂಗದ ಮಹಾನ್ ಪಿರಮಿಡ್ಡೇ ಇರಬಹುದು. ಈ ಪೃಥ್ವಿಯ ಮೇಲೆ ಯಾವ ಮಹಾನ್ ವ್ಯಕ್ತಿಯ ಸ್ಮಾರಕವೂ ಶಾಶ್ವತ ಅಲ್ಲ, ಯಾವುದೂ ಶಾಶ್ವತ ಅಲ್ಲ ಎಂಬುದನ್ನು ಪ್ರಕೃತಿ ಸದಾ ಸಾರುತ್ತಿರುತ್ತದೆ. ಪ್ರಕೃತಿಯ ದೃಷ್ಟಿಯಲ್ಲಿ ಅಶಾಶತ್ವವೇ ಶಾಶ್ವತ ಸತ್ಯ!

ತಾಜಮಹಲಿನಿಂದಾಗಿ ಒಂದು ಉಪಕಾರವಾಗಿದೆ: ವಾಯು ಮಾಲಿನ್ಯದ ವಿರುದ್ಧ ಸರಕಾರದ ಕಣ್ತೆರೆಸುವ ಕೆಲಸದಲ್ಲಿ ಇದು ನೆರವಿಗೆ ಬಂದಿದೆ. ಮಥುರಾ ಬಳಿ ಇರುವ ಪೆಟ್ರೋಲಿಯಂ ಸಂಸ್ಕರಣಾ ಘಟಕದಿಂದ ಹೊಮ್ಮುವ ಹೊಗೆಯಿಂದಾಗಿ ಆಸಿಡ್ ಮಳೆ ಸುರಿದು ತಾಜ್ ಮಹಲ್‌ನ ಅಮೃತ ಶಿಲೆಗಳ ಮೇಲೆಲ್ಲಾ ಕಪ್ಪು ಕಲೆ (ಸ್ಟೋನ್ ಕ್ಯಾನ್ಸರ್) ಉಂಟಾದೀತೆಂದು ತಜ್ಞರು ಹೇಳಿದ್ದರು. ಆ ಹೆದರಿಕೆಯಿಂದಾಗಿ ಬಹಳಷ್ಟು ಉದ್ಯಮಗಳಲ್ಲಿ ಕಟ್ಟುನಿಟ್ಟಾದ ಮಾಲಿನ್ಯ ನಿಯಂತ್ರಣ ಕ್ರಮಗಳು ಜಾರಿಗೆ ಬಂದವು. ಹದಿನೈದು ವರ್ಷಗಳ ಹಿಂದೆ ಸರ್ವೋಚ್ಛ ನ್ಯಾಯಾಲಯವೇ ತಾಜ್ ಮಹಲಿನ ಸುತ್ತ ಮುತ್ತಲಿನ ಕೈಗಾರಿಕಾ ಘಟಕಗಳನ್ನು ದೂರ ಸಾಗಿಸಬೇಕು ಎಂಬ ಆದೇಶ ನೀಡಿದ ನಂತರ ಸಾಕಷ್ಟು ಪ್ರಮಾಣದಲ್ಲಿ ಮಾಲಿನ್ಯದ ಕುರಿತು ಜನಜಾಗೃತಿ ಉಂಟಾಯಿತು. ಆ ಮಟ್ಟಿಗೆ ತಾಜ್ ಮಹಲ್‌ನ

ಕೊಡುಗೆ ಅದ್ಭುತ ಎನ್ನಲೇ ಬೇಕು ಹಾಗೆಂದು ತಾಜ್ ಮಹಲೇ ಅದ್ಭುತ ಎನ್ನಲು ಮನಸ್ಸೇಕೊ ತುಸು ಹಿಂಜರಿಯುತ್ತದೆ.

ಮನುಷ್ಯ ನಿರ್ಮಿಸಿದ್ದೇ ಅದ್ಭುತವೆಂದು ಬೀಗುವ ನಾವು ನಿಸರ್ಗದ ಅದ್ಭುತಗಳ ಬಗೆಗೆ ಇಷ್ಟು ಕಾಳಜಿ ವಹಿಸುತ್ತೇವೆಯೆ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಬೆಂದ್ರ್ ತೀರ್ಥ' ಎಂಬ ಬಿಸಿನೀರಿನ ಬುಗ್ಗೆ ಇತ್ತು. ದಕ್ಷಿಣ ಭಾರತದ ಏಕೈಕ ಬಿಸಿಬುಗ್ಗೆಯಾಗಿತ್ತು. ಭರತಖಂಡ ಎಂಬುದು ರೂಪುಗೊಳ್ಳುವ ಮೊದಲೇ ಅಸ್ತಿತ್ವದಲ್ಲಿದ್ದ ಈ ಭೂ ವೈಚಿತ್ರ್ಯ ಮೊನ್ನೆ ಮೊನ್ನೆಯವರೆಗೆ ಉಳಿದು ಬಂದಿತ್ತು. ಸುತ್ತಲಿನ ಅಂತರ್ಜಲದ ಅಸಮರ್ಪಕ ನಿರ್ವಹಣೆಯಿಂದಾಗಿ ನಮ್ಮ ತಲೆಮಾರಿನಲ್ಲಿ ಅದು ನಾಪತ್ತೆಯಾಗಿದೆ. ಹಾಸನ ಜಿಲ್ಲೆಯ ಹೊಳೆನರಸೀಪುರದ ಬಳಿ ಏಷ್ಯಾದಲ್ಲೇ ಅಪರೂಪ ಎನಿಸಿದ 'ಖನಿಜ ಕಾಶಿ' ಇತ್ತು. ನಾಲ್ಕಾರು ಚದರ ಕಿ.ಮಿ. ವಿಸ್ತೀರ್ಣದಲ್ಲಿ ಮೂವತ್ತಕ್ಕೂ ಹೆಚ್ಚು ಬಗೆಯ ಖನಿಜಗಳು, ಸ್ಫಟಿಕಗಳ ಭಂಡಾರವನ್ನು ನಿಸರ್ಗವೇ ನೆಲದಡಿ ಹೂತಿಟ್ಟಿತ್ತು. ಅದೂ ನಮ್ಮ ತಲೆಮಾರಿನಲ್ಲೇ ಕಣ್ಮರೆಯಾಗಿದೆ. ತುಮಕೂರಿನ ಸಮೀಪ 'ನಾಮದ ಚಿಲುಮೆ' ಕೂಡ ಬತ್ತಿಹೋಗಿದೆ.

ಬತ್ತಿಹೋಗಿದ್ದ ರೂಪಾರೆಲ್ ನದಿಗೆ ಮತ್ತೆ ಜೀವ ತುಂಬಿದ ಸಾಧನೆ ನನ್ನ ದೃಷ್ಟಿಯಲ್ಲಿ ಮನುಷ್ಯ ಸೃಷ್ಟಿಯ ನಿಜವಾದ ಅದ್ಭುತ. ನಿಸರ್ಗದ ಎಲ್ಲ ಶಕ್ತಿಗಳೂ ಅದನ್ನು ಇನ್ನಷ್ಟು ಸುಂದರವಾಗಿ, ಇನ್ನಷ್ಟು ಸಮೃದ್ಧವಾಗಿ ವಿಕಸನಗೊಳಿಸಲು ಯತ್ನಿಸುತ್ತಲೇ ಇರುತ್ತದೆ.

ಪ್ರಕೃತಿ ತಾನಾಗಿ ಪೋಷಿಸಿಟ್ಟ ಅದ್ಭುತವೆಂದರೆ ಪಶ್ಚಿಮ ಘಟ್ಟಗಳ ಹಸಿರು ಪಟ್ಟಿ. ಅದನ್ನು ಜಗತ್ತಿನ ಅತ್ಯಪರೂಪದ ಹದಿಮೂರು 'ಜೀವಿ ವೈವಿಧ್ಯ ತಾಣ'ಗಳಲ್ಲಿ ಒಂದೆಂದು ಗುರ್ತಿಸಲಾಗಿದೆ. ಅದು ಭಗ್ನವಾಗುತ್ತಿದೆ, ಛಿದ್ರವಾಗುತ್ತಿದೆ, ಅದರಲ್ಲಿನ ಅಪರೂಪದ ಪ್ರಾಣಿ, ಪಕ್ಷಿ, ಸಸ್ಯತಳಿಗಳು ನಶಿಸುತ್ತಿವೆ ಎಂದು ಅದೆಷ್ಟೇ ಜೋರಾಗಿ ಕೂಗಿದರೂ ವಿನಾಶದ ಕೆಲಸ ಮುಂದುವರಿಯುತ್ತಲೇ ಇದೆ. ಪ್ರಾಯಶಃ ಅದನ್ನು ಆ ಗಿಷಿರ ಪಟ್ಟಿಯಿಂದ ಕಿತ್ತುಹಾಕುತ್ತೇವೆಂದು ವಿಶ್ವ ಮಟ್ಟದ ಸಂಸ್ಥೆಯೊಂದು ಹೇಳಿದರೆ ಅದರ ವಿರುದ್ಧ ಇಷ್ಟೊಂದು (ಅಂದರೆ ತಾಜ್ ಮಹಲ್ ಸಂದರ್ಭದಲ್ಲಿ ನಡೆದಷ್ಟು) ತೀವ್ರ ಜನಜಾಗೃತಿಯ ಯತ್ನ ನಡೆಯಲು ಸಾಧ್ಯವೆ?

ಜಗತ್ತಿನ ಜೀವ ರಾಶಿಗಳಲ್ಲೇ ಅತಿ ವಿಶಿಷ್ಟ ಎನಿಸಿಕೊಂಡ ಸಿಂಗಳೀಕಗಳಾಗಲೀ, ಮುಂಗಟ್ಟೆ ಪಕ್ಷಿಗಳಾಗಲೀ, ಬಣ್ಣದ ಮಂಡೂಕಗಳಾಗಲೀ ಇಲ್ಲಿ ಮಾತ್ರ ಜೀವಿಸಿದೆಯೆಂದೂ ಇಲ್ಲಿ ನಾಶವಾದರೆ ಪ್ರಪಂಚ ನಕಾಶೆಯಿಂದಲೇ ಅವು ಕಣ್ಮರೆ ಆಗುತ್ತವೆಂದೂ ಕೂಗಿ ಕೂಗಿ ಹೇಳಿದರೆ ಎಷ್ಟು ಜನರು ಕೇಳುತ್ತಾರೆ? ಕೇಳಿ ಸ್ಪಂದಿಸುತ್ತಾರೆ?

ತಾಜ್‌ಗೆ ಇರುವ ಆಕರ್ಷಣೆ, ಜನಮಾನ್ಯತೆ ಇವಕ್ಕೇಕಿಲ್ಲ?

– ಸಾಭಾರ – ಅಡಿಕೆ ಪತ್ರಿಕೆ

* * *

ಜನಪದ ಧ್ವನಿ

ಅಂಗೈಯೊಳಗಿನ ಬ್ರಹ್ಮ ರಾಕ್ಷಸ

ಇಂದು ಪ್ರಪಂಚದ ಸುಮಾರು ೬೫೦ ಕೋಟಿ ಜನರ ಪೈಕಿ ೧೦೦ ಕೋಟಿ ಜನರ ಅಂಗೈಯಲ್ಲಿ ಮೊಬೈಲ್ ಎಂಬ ಆಧುನಿಕ ಬ್ರಹ್ಮರಾಕ್ಷಸನಿದ್ದರೂ ಅದು ವೈಯುಕ್ತಿಕವಾಗಿ ಅವರ ಗಮನಕ್ಕೆ ಬಾರದಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಸಂಖ್ಯೆ ದಿನದಿಂದ ದಿನಕ್ಕೆ ರಕ್ತಬೀಜಾಸುರನ ಹಾಗೆ ವೃದ್ಧಿಯಾಗುತ್ತಲೇ ಇರುವುದು ಶುಭಸಂಕೇತವಲ್ಲ. ನಮ್ಮ ದೇಶದ ಜನರಿಗೆ ಪ್ರತಿಷ್ಠಿತ ಒಲಂಪಿಕ್ಸನಲ್ಲಿ ಚಿನ್ನದ ಪದಕ ಪಡೆಯಲು ಸಾಧ್ಯವಾಗದಿರಬಹುದು, ಆದರೆ ಈ ರಾಕ್ಷಸನನ್ನು ಅಂಗೈಯಲ್ಲಿಟ್ಟುಕೊಂಡು ಏನೋ ಸಾಧಿಸಿರುವ ಭ್ರಮೆಯಲ್ಲಿ ತಿರುಗಾಡುತ್ತಿರುವುದು ಶೋಚನೀಯ.

ಅಂಗೈಯೊಳಗೆ ಕುಳಿತುಕೊಳ್ಳುವ –ಚಲನೆಯಲ್ಲಿಯೂ, ಮನಬಂದಲ್ಲಿಯೂ ಉಪಯೋಗಿಸಲ್ಪಡುತ್ತಿರುವ ಪುಟ್ಟ ನಿಸ್ತಂತು ದೂರವಾಣಿ, ಅರ್ಥಾತ್ ಮೊಬೈಲ್ ಎಂದು ಕರೆಸಿಕೊಳ್ಳುವ ಯಂತ್ರರಾಕ್ಷಸನೇ ಮುಂದೊಂದು ದಿನ ಪುರಾಣದ ರಾಕ್ಷಸರಿಗಿಂತ ಹೆಚ್ಚು ಅಪಾಯಕಾರಿಯಾಗುವ ಲಕ್ಷಣಗಳು ಕಾಣುತ್ತಿವೆ. ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವವರ ಕುತ್ತಿಗೆಯಲ್ಲಿ, ವಿದ್ಯಾರ್ಥಿಗಳ ಕಿಸೆಯಲ್ಲಿ, ಮಹಿಳೆಯರ ಜಂಭದ ಚೀಲದಲ್ಲಿ ಹಳ್ಳಿ ನಗರಗಳೆಂಬ ಭೇದವಿಲ್ಲದೆ ಎಲ್ಲಾ ಕಡೆ ಇದರದೇ ಕಾರುಬಾರು. ಎಲ್ಲರೂ ಸಂದೇಶ ಕಳುಹಿಸುವುದರಲ್ಲಿ ಮತ್ತು ಪಡೆಯುವುದರಲ್ಲಿ ವ್ಯಸ್ತರು. ಆದರೆ ಇದರಲ್ಲಿ ತೊಂಭತ್ತು ಪ್ರತಿಶತ ಅಗತ್ಯವಿಲ್ಲದ ಸಂದೇಶಗಳೇ ಆಗಿರುತ್ತವೆ. ವಾಹನ ಚಾಲನೆ ಮಾಡುತ್ತಿರುವಾಗ ಇದರ ಉಪಯೋಗ ಮಾಡಿ ಕೈ ಕಾಲು, ಪ್ರಾಣ ಕಳೆದುಕೊಳ್ಳುತ್ತಿರುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿದೆ.

ಈ ಯಂತ್ರದ ಉಪಯೋಗದಲ್ಲಿ ಯುವ ಗ್ರಾಹಕರ ಸಂಖ್ಯೆ ಪ್ರತಿಶತ್ ೨೨%. ಇವರು ಸಂದೇಶ ಕಳುಹಿಸಲು ವ್ಯಯಿಸುವ ಅಂದಾಜು ವೆಚ್ಚ ವರ್ಷಕ್ಕೆ ಕೇವಲ ೧೧೬೦೦ ಕೋಟಿ ರೂಪಾಯಿಗಳು. ಅಧಿಕಾಂಶ ಸಂದೇಶಗಳು ಅನಗತ್ಯ ವಿಷಯಗಳೇ. ಈ ಯಂತ್ರಗಳನ್ನು ಮಾರಾಟ ಮಾಡುತ್ತಿರುವ ಕಂಪೆನಿಗಳ ವಿವಿಧ ಆಮಿಷಗಳಿಗೆ ಒಳಗಾಗಿ ದುಬಾರಿ ಖರ್ಚನ್ನು ಅರಿವಿಲ್ಲದೆಯೇ ಮಾಡುವವರೇ ಹೆಚ್ಚು. ಯಂತ್ರಗಳಲ್ಲಿ ಅನಗತ್ಯದ

ತರಹೇವಾರಿ ಸೌಲಭ್ಯಗಳನ್ನು ಸೇರಿಸಿ ಹಣ ಸೆಳೆಯುವುದರಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಇದರ ಉಪಯೋಗದಿಂದ ಬರಬಹುದಾದ ದುಷ್ಪರಿಣಾಮಗಳ, ರೋಗಗಳ ಪಟ್ಟಿ ಒಂದೊಂದೆ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ. ವೈದ್ಯರು ಕೂಡಾ ಇದನ್ನು ನಿರಾಕರಿಸುತ್ತಿಲ್ಲ. ಆರ್ಥಿಕ ಹೊರೆಯ ಜೊತೆಗೆ ಆರೋಗ್ಯದ ತೊಂದರೆಗಳು, ದೇಹದ ವಿವಿಧ ಭಾಗಗಳ ಮೇಲೆ ಪರಿಣಾಮ, ಶ್ರವಣ ಶಕ್ತಿ ಕುಂದುವಿಕೆ, ಅಪಘಾತಸಂಭವ, ಅಶ್ಲೀಲ ಸಂದೇಶಗಳ ರವಾನೆ, ವಿಡೀಯೋ ಸೆಕ್ಸ್ ಹಗರಣ, ಪರೀಕ್ಷೆ ಹಾಲಿನಲ್ಲಿ ಉತ್ತರ ತರಿಸಿ ಡಿಬಾರ್ ಆಗುವುದು ಹೀಗೆ ಪಟ್ಟಿ ದಿನದಿನಕ್ಕೆ ಬೆಳೆಯುತ್ತಾ ಇದೆ. ಅಶ್ಲೀಲ ಸಂದೇಶ ಮತ್ತು ಸೆಕ್ಸ್ ದೃಶ್ಯಗಳ ರವಾನೆಯಿಂದ ಅಮಾಯಕ ಸ್ತ್ರೀಯರು, ಮುಗ್ಧ ತರುಣಿಯರನ್ನು ಬಲಿಪಶು ಮಾಡಿ ಆತ್ಮಹತ್ಯೆ ಮಾಡುವಂತಹ ಸನ್ನಿವೇಶಗಳಿಗೂ ತಳ್ಳುತ್ತಿರುವ ಈ ಯಂತ್ರ, ಮುಂದೆ ವಿಕೃತ ಮನಸ್ಸಿನವರಿಂದ ಯಾವ ರೀತಿ ಬಳಸಲ್ಪಡುವುದೆಂದು ಊಹಿಸಲೂ ಅಸಾಧ್ಯ. ಇದರ ಕೆಡುಕು ಸ್ವಂತಕ್ಕೆ ಆಗುವವರೆಗೆ ಅದರ ಗಂಭೀರತೆಯನ್ನು ಪರಿಗಣಿಸುವ ಹಂತಕ್ಕೆ ಹೋಗುವವರು ವಿರಳ.

ಈ ಯಂತ್ರದ ಆವಿಷ್ಕಾರ ಖಂಡಿತ ಅನಗತ್ಯವಲ್ಲ. ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ ಯಂತ್ರಗಳು ನಮ್ಮ ಮೇಲೆ ಸವಾರಿ ಮಾಡಲು ಬಿಡಬಾರದು. ನಾವು ಅವುಗಳ ಮೇಲೆ ಸವಾರಿ ಮಾಡಬೇಕು. ನಿಸ್ತಂತು ಸಂದೇಶ ಕಳುಹಿಸುವ ಆವಿಷ್ಕಾರ ಅದ್ಭುತ ಹಾಗೂ ಕ್ರಾಂತಿಕಾರಕ ಬೆಳವಣಿಗೆ. ಇದರ ಅಗತ್ಯತೆಯ ಸದುಪಯೋಗ ಮಾಡಿದಲ್ಲಿ ಮಾನವಸ್ನೇಹಿ, ಇಲ್ಲವಾದಲ್ಲಿ ಪರಮಾಣು ಬಾಂಬಿನ ಆವಿಷ್ಕಾರದಂತೆ ಬ್ರಹ್ಮರಾಕ್ಷಸನಾಗಿ ಕಾಡುವ ಸಾಧ್ಯತೆ ಹೆಚ್ಚು. ಜನ ಎಚ್ಚೆತ್ತು, ಅರಿವು ಮೂಡಿಸಿಕೊಂಡು ಬಳಕೆ ಮಾಡಿದಲ್ಲಿ ಇದರ ಅಮೃತಫಲವನ್ನು ಸವಿಯಬಹುದು.

– ಆರೂರು ಮಂಜುನಾಥರಾವ್. ಉಡುಪಿ.

* * *

ಸನ್ಮಾನ್ಯರಿಂದ

೨೦೦೨ ಜುಲೈ ಮಾಹೆಯ ಜನಪದ ವಿಚಾರದಲ್ಲಿ ಎಸ್. ಎಲ್ ಭೈರಪ್ಪನವರ ಕೃತಿ ಆವರಣವನ್ನು ಕುರಿತ ಸುರೇಂದ್ರ ಕೌಲಗಿಯವರ "ಆವರಣ- ಅನಾವರಣ- ಪರ್ಯಾವರಣ" ಲೇಖನವನ್ನು ಓದಿದೆ. ತಾವೊಬ್ಬ ಸತ್ಯಾನ್ವೇಷಕರೆಂದು ಹೇಳಿಕೊಂಡಿರುವ ಭೈರಪ್ಪನವರು ಸತ್ಯ ಸಂಗತಿಗಳಿಗೆ ಚ್ಯುತಿ ಬಾರದಂತೆ ಔರಂಗ ಜೇಬನ ಆಳ್ವಿಕೆಯ ಚಿತ್ರಣವನ್ನು ನೀಡುವುದರ ಜೊತೆಗೆ ಅದರ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯವೆಂದು ಸೂಚ್ಯವಾಗಿ ತಿಳಿಸಿದ್ದಾರೆ. ಮತಾಂತರ ಹೊಂದಿ ಮುಸ್ಲಿಂ ಯುವಕನನ್ನು ಮದುವೆಯಾದ ಲಕ್ಷ್ಮಿ '(ರಜಿಯಾ)' 'ಧರ್ಮಸಂಕಟ'ದಲ್ಲಿ ಸಿಲುಕಿಕೊಂಡು ಒದ್ದಾಡುವುದನ್ನು ಪ್ರೊ. ಶಾಸ್ತ್ರಿ ಪಾತ್ರವನ್ನು ಬಹಳ ಚೆನ್ನಾಗಿ ಚಿತ್ರಿಸಿ ಸಮಾಜವನ್ನು ಎಚ್ಚರಿಸಿದ್ದಾರೆ. ಸಾಮಾಜಿಕ ಕಳಕಳಿ ಕಾದಂಬರಿಯಲ್ಲಿ ಎದ್ದು ಕಾಣುತ್ತದೆ. 'ಆವರಣ' ಈ ಕಾರಣಕ್ಕಾಗಿ ಅತಿ ಶೀಘ್ರವಾಗಿ ಯಶಸ್ಸನ್ನು ಕಂಡಿರುವುದು ಮಾತ್ರವಲ್ಲದೇ ಮಾರಾಟದಲ್ಲಿ ದಾಖಲೆಯನ್ನು ಸೃಷ್ಟಿಸಿದೆ.

– ಎಂ.ಜಿ.ಶಿವರಾಂ. ಬೆಂಗಳೂರು-೭೮

* * *

೨೦೦೭ ಜುಲೈ ಮಾಹೆ ಸಂಚಿಕೆಯ 'ಜನಪದ ನಿಲಯದ ಅಂತರಂಗದಲ್ಲಿ' ಕಾಣಿಸಲಾದ 'ನಮ್ಮ ಅಂಗಡಿ' ಯಲ್ಲಿ ಬೀಡಿ, ಸಿಗರೇಟ್ ಮಾರಾಟ ನಿಷೇಧಿಸಿದ್ದು ಅತ್ಯಂತ ಸ್ತುತ್ಯ. ಯಾವುದೇ ಆಮಿಷಕ್ಕಾಗಿಯೂ ಮೌಲ್ಯವನ್ನು ಬಲಿಕೊಡಲಾಗದು.


ರಾವಣ,ಸೀತೆಯನ್ನು ಲಂಕಾಧೀಶ್ವರಿಯನ್ನಾಗಿ ಮಾಡುವೆ, ರಾಮನನ್ನು ಮರೆತು ಬಿಡು ಎಂದ. ಆಕೆ ಶೀಲವನ್ನು ಬಲಿಗೊಟ್ಟಳೆ? ಬ್ರಿಟಿಷರು ಗಾಂಧೀಜಿಗೆ ನಿನ್ನನ್ನು ಭಾರತದ ಚಕ್ರವರ್ತಿ ಮಾಡುತ್ತೇವೆ, ಸತ್ಯಾಗ್ರಹ ನಿಲ್ಲಿಸಿಬಿಡು ಎಂದು ಬೇಡಿದರು. ಸತ್ಯಾಗ್ರಹ ಇಮ್ಮಡಿಸಿತೆ ಹೊರತು ತಗ್ಗಲಿಲ್ಲವಲ್ಲ! ಸಣ್ಣ ಪ್ರಮಾಣದದ್ದಾದರೂ ನೀವು ಸತ್ಯಕ್ಕೆ ಬೆಲೆಕೊಟ್ಟದ್ದು ನನ್ನ ಮನಸ್ಸಿಗೆ ಚೇತೋಹಾರಿ ಎನ್ನಿಸಿತು.

ಈ ಸಂಚಿಕೆಯಲ್ಲಿನ 'ಸಿದ್ಧವನ ಹಳ್ಳಿ ಕೃಷ್ಣ ಶರ್ಮರ ನೆನಪಿನಲ್ಲಿ' ಲೇಖನ ಓದಿದಾಗ ದಿ॥ ಸಿದ್ದವನಹಳ್ಳಿ ಕೃಷ್ಣ ಶರ್ಮ ಮತ್ತು ನಾನು ಒಂದೇ ವೇದಿಕೆಯಲ್ಲಿ ನಿಂತು ಭಾಷಣ ಮಾಡಿದ್ದ ನೆನಪು ಮರುಕಳಿಸಿತು. ಅವರದ್ದು ಸತ್ವ ಪೂರ್ಣ ಮಾತು, ಬರಹ, ಬಾಳೂ ಸಹ.

– ಶಾರದಾ ಜಡೆ, ಸಾಂಗ್ಲಿ (ಮಹಾರಾಷ್ಟ್ರ)

ಜನಪದ ನಿಲಯದ ಅಂತರಂಗದಲ್ಲಿ ೪೬

– ಸುರೇಂದ್ರ ಕೌಲಗಿ



ಹೊಸ ಜೀವನ ದಾರಿಯಲ್ಲಿದ್ದ" ನಮ್ಮ ಅಂಗಡಿ" ಕಾಲ ಕ್ರಮೇಣ ಹೇಗೆ ಸುತ್ತಲಿನ ಜನಕ್ಕೆ ಒಂದು ಸೇವಾಕೇಂದ್ರವಾಗಿ ರೂಪಾಂತರಗೊಂಡಿತು ಎಂಬುದು ವಿಶೇಷ ಮಹತ್ವದ ಸಂಗತಿಯಾಗಿದೆ. "ನಮ್ಮ ಅಂಗಡಿ" ಮೂಲತ: ಅಡುಗೆ ಸಾಮಾನುಗಳನ್ನು ಮಾರುವ ಅಂಗಡಿಯಾಗಿದ್ದರೂ ಕೂಡ ಹೊಸ ಜೀವನ ದಾರಿಯ ಧ್ಯೇಯೋದ್ದೇಶಕ್ಕನುಗುಣವಾಗಿ ತನ್ನನ್ನು ಒಂದು ಸೇವಾ ಕೇಂದ್ರವನ್ನಾಗಿ ಬದಲಾಯಿಸಿಕೊಂಡಿತು. ಹೊಸ ಜೀವನ ದಾರಿ ಸುತ್ತಲೂ ಹಲವಾರು ಹಳ್ಳಿಗಳಿವೆ. ಒಂದೆರಡು ಹಳ್ಳಿಗಳಂತೂ ತುಂಬಾ ಹತ್ತಿರದಲ್ಲಿವೆ. ಅಲ್ಲದೆ ಆ ಹಳ್ಳಿಯ ಕೆಲವು ರೈತರು ತಮ್ಮ ದನಕರು ಮತ್ತು ಕುರಿಗಳನ್ನು ಮೇಯಿಸಲು ಅಕ್ಕ ಪಕ್ಕದ ಕಾಡಿಗೆ ಬರುತ್ತಿದ್ದರು. ಈ ಕಾರಣಗಳಿಂದಾಗೆ ಸ್ಥಳದ ರೈತರ ಕೆಲವು ಮುಖ್ಯ ಸಮಸ್ಯೆಗಳ ಅರಿವಾಗುತಾ ಬಂತು. ಅವುಗಳಲ್ಲಿ ಪ್ರಮುಖವಾದದ್ದು ಸಣ್ಣ ಹಿಡುವಳಿದಾರ ರೈತರಿಗೆ ಉಳುಮೆ ಮಾಡಲು ತಮ್ಮದೇ ಆದ ಎತುಗಳಾಗಲಿ, ನೇಗಿಲುಗಳಾಗಲಿ ಇಲ್ಲ ಎಂಬುದು ಆ ಸಮಸ್ಯೆಗಳಲ್ಲಿ ಒಂದಾಗಿತು. ಬಡರೈತರಲ್ಲಿದ್ದ ವ್ಯವಸಾಯಕ್ಕೆ ಸಂಬಂಧಿಸಿದ ಈ ಸಾಧನಗಳ ಅಭಾವವನ್ನು ಹಳ್ಳಿಗಳೆಲ್ಲಿಯ ಕೆಲ ಶ್ರೀಮಂತ ರೈತರು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಅಂದರೆ ಮಳೆ ಬಂದಾಗ ತಕ್ಷಣ ತಮ್ಮ ಜಮೀನಿನ ಉಳುಮೆಗೆ ಈ ಅಭಾವಪೀಡಿತ ರೈತರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಆ ಶ್ರೀಮಂತ ರೈತರ ವ್ಯವಸಾಯದ ಎಲ್ಲ ಕೆಲಸವನ್ನು ಈ ಬಡರೈತರು ಮಾಡಬೇಕಿತು. ಆ ಕೆಲಸಕ್ಕೆ ದೊಡ್ಡ ರೈತರು ತಮ್ಮ ಎತು ಮತ್ತು ನೇಗಿಲುಗಳನ್ನು ಕೊಡುತ್ತಿದ್ದರು. ಇದರಿಂದಾಗಿ ಚಿಕ್ಕ ಹಿಡುವಳಿಯ ರೈತರು ಸಕಾಲಿಕವಾಗಿ ವ್ಯವಸಾಯ ಮಾಡದೆ ವರ್ಷವಿಡೀ ತಮಗೆ ಬೇಕಾದ ಆಹಾರ ಧಾನ್ಯಗಳನ್ನು ಬೆಳೆದುಕೊಳ್ಳಲು ಸಾಧ್ಯವಾಗುತಿರಲಿಲ್ಲ. ಚಿಕ್ಕ ಹಿಡುವಳಿದಾರರ ಈ ಇಕ್ಕಟ್ಟಿನ ಪರಿಸ್ಥಿತಿಯನ್ನು ತಿಳಿದು ರೈತರು ಉಳುಮೆಗೆ ತುಂಬಾ ಅಗತ್ಯವಾದ ಒಂದು ಜೊತೆ ಎತು ಮತು ನೇಗಿಲನ್ನು "ನಮ್ಮ ಅಂಗಡಿ" ಮೂಲಕ ಅಗತ್ಯವಿರುವ ರೈತರಿಗೆ ಉಳುಮೆ ಮಾಡುವುದಕ್ಕಾಗಿ ಕನಿಷ್ಠ ಬಾಡಿಗೆಗೆ ಕೊಡಲಾಗುತಿತು. ಈ ಕ್ರಮವನ್ನು ಅನೇಕ ಬಡರೈತರು ಸ್ವಾಗತಿಸಿದರು.ಮತ್ತು ಈ ಯೋಜನೆಯ ಲಾಭವನ್ನೆ ಪಡೆದರು. ಈ ರೀತಿ ಬಡ ರೈತರಿಗೆ ಸಕಾಲಕ್ಕೆ ಸುಲಭವಾಗಿ ಎತು ಮತು ನೇಗಿಲು ದೊರೆಯುತಿದ್ದುದರಿಂದ ಮಳೆ ಬಿದ್ದ ಕೂಡಲೆ ಅವರು ಶ್ರೀಮಂತ ರೈತರ ಹೊಲದಲ್ಲಿ ಕೆಲಸ ಮಾಡುವುದಕ್ಕೆ ಹೋಗುವುದರ ಬದಲಾಗಿ ತಮ್ಮ ಹೊಲದಲ್ಲಿಯೆ ಕೆಲಸ ಮಾಡಲು ಪ್ರಾರಂಭಿಸಿದರು. ಮತ್ತು ತಮಗೆ ಬೇಕಾದ ಧಾನ್ಯವನ್ನು ಬೆಳೆದುಕೊಳ್ಳಲು ಸಮರ್ಥರಾದರು. ನಮ್ಮ ಅಂಗಡಿಯ ಈ ವ್ಯವಸಾಯ ಸೇವೆಯನ್ನು ಹಳ್ಳಿಯಲ್ಲಿಯ ಕೆಲ ಶ್ರೀಮಂತ ರೈತರು ಉದಾರ ದೃಷ್ಟಿಯಿಂದ ನೋಡಲಿಲ್ಲ. ರೈತರಿಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕ್ರಿಮಿನಾಶಕ ಔಷಧಿಯನ್ನು ಸಿಂಪಡಿಸುವ ಯಂತ್ರಗಳನ್ನು ಸಹ ತಂದಿರಿಸಲಾಯಿತು. ಅವುಗಳನ್ನು ಕೂಡ ರೈತರಿಗೆ ಕಡಿಮೆ ಬೆಲೆಯಲ್ಲಿ ಬಾಡಿಗೆಗೆ ಕೊಡಲಾಗುತಿತು.ಔಷಧಿ ಸಿಂಪಡಣೆ ಯಂತ್ರಗಳು ಎರಡು ಬಗೆಯದಾಗಿದ್ದವು. ಒಂದು ಬೆನ್ನ ಮೇಲಿಟ್ಟುಕೊಂಡು ಔಷಧಿಯನ್ನು ಸಿಂಪಡಿಸುವ ಯಂತ್ರ, ಇನ್ನೊಂದು ಕೈಯಿಂದ ಪಂಪ್ ಮಾಡಿ ಕೊಳವೆಯ ಮೂಲಕ ದೂರ ತೆಗೆದುಕೊಂಡು ಹೋಗಿ ಸಿಂಪಡಿಸುವ

ಯಂತ್ರ ಈ ಎರಡೂ ಯಂತ್ರಗಳನ್ನು ಯಾವಾಗಲೂ ಸುಸ್ಥಿತಿಯಲ್ಲಿಡಲಾಗಿರುತ್ತಿತ್ತು ಮತ್ತು ರೈತರು ತಮಗೆ ಅನುಕೂಲವಾದ ಸಮಯದಲ್ಲಿ ಬಂದು ತೆಗೆದುಕೊಂಡು ಹೋಗಬಹುದಿತ್ತು. ಈ ವ್ಯವಸ್ಥೆಯೂ ಕೂಡ ಸುತ್ತಲಿನ ರೈತರಿಗೆ ಬಹು ಮೆಚ್ಚುಗೆಯಾಯಿತು. ಹೀಗೆ ನಮ್ಮ ಅಂಗಡಿಯು ಕ್ರಮೇಣ ಒಕ್ಕಲುತನ ಸೇವಾ ಕೇಂದ್ರವಾಗಿ ಬೆಳೆಯುತ್ತಾ ಬಂತು. ಮುಂದೆ ರೈತರ ಬೇಡಿಕೆಗೆ ಅನುಸಾರವಾಗಿ ಕಾಲಕ್ಕೆ ಸರಿಯಾಗಿ ಉತ್ತಮ ಗುಣಮಟ್ಟದ ರಾಗಿ, ಹಣ್ಣು ಮತ್ತು ತರಕಾರಿ ಬೀಜಗಳ ಮಾರಾಟವನ್ನೂ ಪ್ರಾರಂಭಿಸಲಾಯಿತು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತೋಟಗಾರಿಕೆ ಇಲಾಖೆಯೊಂದಿಗೆ ಸಂಪರ್ಕ ಬೆಳೆಸಿಕೊಂಡು ಆ ಇಲಾಖೆಯ ಯೋಜನೆಯಡಿಯಲ್ಲಿ ಉಚಿತವಾದ ತೆಂಗಿನ ಸಸಿಗಳನ್ನು ಪಡೆದು ಸುತ್ತಲಿನ ಹಳ್ಳಿಯಲ್ಲಿಯ ಬಡರೈತರಿಗೆ ಆ ಸಸಿಗಳನ್ನು ಹಂಚಲಾಯಿತು. ಈ ಮೂವತ್ತು ವರ್ಷಗಳ ಅವಧಿಯಲ್ಲಿ ಆ ಸಸಿಗಳೆಲ್ಲವು ದೊಡ್ಡದಾಗಿ ಬೆಳೆದು ಸಂಬಂಧಪಟ್ಟ ರೈತರಿಗೆ ಒಳ್ಳೆಯ ಫಲಗಳನ್ನು ಕೊಡುತ್ತಿವೆ. ತೆಂಗಿನ ಸಸಿಗಳನ್ನು ಪಡೆದು ಅನುಕೂಲ ಮಾಡಿಕೊಂಡಿರುವ ರೈತರು ಈಗಲೂ ಪಕ್ಕದ ಹೊಸಹಳ್ಳಿ ಗ್ರಾಮದಲ್ಲಿದ್ದಾರೆ. ಮತ್ತು ಅಲ್ಲಿಗೆ ಹೋದಾಗಲೆಲ್ಲ ತುಂಬಾ ಕೃತಜ್ಞತೆಯಿಂದ ಸಹಾಯವನ್ನು ಸ್ಮರಿಸಿ ಕೊಂಡಾಡುತ್ತಾರೆ. ಈ ಅವಧಿಯಲ್ಲಿ "Lab to Land" ಎಂಬ ಯೋಜನೆ ಟ್ರಸ್ಟಿಗೆ ಮಂಜೂರಾಗಿತ್ತು. ಈ ಯೋಜನೆಯನ್ವಯ ಬಡ ಕೃಷಿ ಕಾರ್ಮಿಕರಿಗೆ ಕೂಲಿಯ ಬದಲಾಗಿ ಗೋಧಿಯನ್ನು ಕೊಡಲಾಗುತ್ತಿತ್ತು. ಈ ಯೋಜನೆಯನ್ನು ಉಪಯೋಗಿಸಿಕೊಂಡು ಹೊಸ ಜೀವನದಾರಿ ಕೇಂದ್ರದಲ್ಲಿ ಬಹಳಷ್ಟು ಭೂ ಅಭಿವೃದ್ಧಿ ಕೆಲಸಗಳನ್ನು ಮಾಡಲಾಯಿತು. ಕೆಲವೊಮ್ಮೆ ಬಡ ಕೃಷಿ ಕಾರ್ಮಿಕರನ್ನು ಗುರ್ತಿಸಿ ಬನ್ನೂರು ತಳಿ ಕುರಿಯನ್ನು ಜೊತೆಯಾಗಿ ಹಂಚಲಾಯಿತು. ಇದೆಲ್ಲ ಕಾರ್ಯಕ್ರಮ ಒಕ್ಕಲುತನ ಸೇವಾ ಕೇಂದ್ರದ ಮೂಲಕ ನಡೆಯಿತು.

ಇನ್ನೊಂದು ಹೊಸ ಮುಖ್ಯ ಕಾರ್ಯಕ್ರಮ " ಕಾಳು ಬ್ಯಾಂಕಿ"ನದು (Grain Bank) ಅಂದರೆ ಪ್ರತಿಯೊಬ್ಬ ರೈತ ಸುಗ್ಗಿಯ ಸಮಯದಲ್ಲಿ ಐದರಿಂದ ಹತ್ತು ಸೇರು ರಾಗಿಯನ್ನು ಕಾಳಿನ ಈ ಬ್ಯಾಂಕಿಗೆ ಕೊಡಬೇಕು. ಮುಂದೆ ರೈತರಿಗೆ ಯಾವುದೇ ಕಾರಣದಿಂದ ಆಹಾರದ ಅಭಾವವುಂಟಾದಾಗ ಈ ಕಾಳು ಬ್ಯಾಂಕಿನಿಂದ ಕಾಳನ್ನು ಕನಿಷ್ಠ ಪ್ರಮಾಣದಲ್ಲಿ ಎರವಲಾಗಿ ಪಡೆದು ನಂತರ ಮುಂದಿನ ಸುಗ್ಗಿಯಲ್ಲಿ ಎರವಲು ಪಡೆದ ರಾಗಿಯೊಂದಿಗೆ ಮತ್ತೆ ಐದು ಸೇರು ರಾಗಿಯನ್ನು ಸೇರಿಸಿ ಈ ಕಾಳುನಿಧಿಗೆ ಕೊಡಬೇಕಾಗಿತ್ತು. ಈ ಕಾಳು ನಿಧಿಯಿಂದ ಬಡರೈತರಿಗೆ ಬಹಳ ಪ್ರಯೋಜನವಾಯಿತು. ಏಕೆಂದರೆ ಮನೆಯಲ್ಲಿ ಆಹಾರದ ಕೊರತೆ ಉಂಟಾದಾಗ ರೈತರು ತಾವು ಬೆಳೆದ ತರಕಾರಿಯನ್ನು ಕಡಿಮೆ ಬೆಲೆಗೆ ಮಾರಿಬಿಡುತ್ತಿದ್ದರು. ಕಾಳುನಿಧಿಯ ಯೋಜನೆಯಿಂದ ಅವರಲ್ಲಿ ಆರ್ಥಿಕ ಬಿಕ್ಕಟ್ಟನ್ನು ತಡೆದುಕೊಳ್ಳುವ ಶಕ್ತಿ ಸಾಮಾರ್ಥ್ಯ ಬರುತ್ತಿತ್ತು. ಕಾಳುನಿಧಿಯ ಈ ಯೋಜನೆಯನ್ನು ಸಹ ರೈತರು ಬಹುವಾಗಿ ಮೆಚ್ಚಿದರು ಮತ್ತೆ ಅದೊಂದು ವರವಾಗಿ ಪರಿಣಮಿಸಿದೆಯೆಂದು ಭಾವಿಸಿದರು.

ಹೀಗೆ ಚಿಕ್ಕ ಅಂಗಡಿಯೊಂದು ಸುತ್ತಲಿನ ರೈತರ ಜೀವನದಲ್ಲಿ ಆರ್ಥಿಕ ಸುಧಾರಣೆಯನ್ನು ತಂದಿತೆಂಬುದು ಗಮನಿಸುವ ಸಂಗತಿಯಾಗಿದೆ. ಇದೆಲ್ಲವು ರೈತರಿಂದ ರೈತರಿಗಾಗಿ ನಡೆಯುವಂಥ ಯೋಜನೆಯೇ ಆಗಿತ್ತು. ಇದರಲ್ಲಿ ಸರ್ಕಾರದ ಯಾವ ಪಾತ್ರವೂ ಇರಲಿಲ್ಲ. ಈ ಎಲ್ಲ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಆಗ ಹೊಸ ಜೀವನ ದಾರಿ ನಿವಾಸಿಗಳಾಗಿದ್ದ ಹನುಮಂತ ಮತ್ತು ಕುಮಾರ ಸ್ವಾಮಿಯವರನ್ನು ಮರೆಯುವಂತಿಲ್ಲ. ಹೊಸ ಜೀವನ ದಾರಿ ಕೇಂದ್ರವು ಹೊರಗಿನಿಂದ ಬರುವ ಜನರಿಗೆ ವೈಚಾರಿಕ ದೃಷ್ಟಿಯನ್ನು ಕೊಡುವಂತೆಯೇ ಸುತ್ತಲಿನ ರೈತರಿಗೆ ಅವರಿಗೆ ಅಗತ್ಯವಾದ ನೆರವನ್ನು ಕೊಡುವುದರ ಮೂಲಕ ಜನಪ್ರಿಯ ಕೇಂದ್ರವಾಗಿ ಉಳಿದು ಬೆಳೆದು ಬಂತು. (ಮುಂದುವರಿಯುವುದು)

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com